## ಕರ್ನಾಟಕ ಪ್ರದೇಶ ಜನತಾದಳ (ಜಾತ್ಯತೀತ)



ಕರ್ನಾಟಕ
ವಿಧಾನಸಭೆ
ಚುನಾವಣೆ

ಮೇ. 10
**2023**

ಜನತಾ ಪರ್ವದಡಿ ರೂಪಿಸಿ ರಾಜ್ಯದಾದ್ಯಂತ ಕೈಗೊಂಡ ಜನತಾ ಜಲಧಾರೆ ಯಾತ್ರೆ ಮತ್ತು ಪಂಚರತ್ನ ರಥಯಾತ್ರೆ ಕಾರ್ಯಕ್ರಮಗಳ ಅಡಿಯಲ್ಲಿ ಹಾಗೂ ಜನತಾ ಮಿತ್ರ ಯಾತ್ರೆಯಲ್ಲಿ ರಾಜ್ಯದ ಜನತೆಯಿಂದ ಸ್ವೀಕರಿಸಿರುವ

## ಸಲಹೆ ಮತ್ತು ಅಪೇಕ್ಷೆಗಳ ಆಧಾರಿತ

# ಜನತಾ ಪ್ರಣಾಳಿಕೆ

ಪ್ರಕಟಣೆ: ಅಧ್ಯಕ್ಷರು, ಜನತಾದಳ (ಜಾತ್ಯತೀತ), ಕೇಂದ್ರ ಕಚೇರಿ, ಜೆ.ಪಿ.ಭವನ, ಫ್ಲಾಟ್ ಫಾರಂ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-560 020 I ಪ್ರತಿಗಳು: 20,000



# ಜನತಾ ಪ್ರಣಾಳಿಕೆ 2023


6-11 ಸಾಮಾಜಿಕ ಭದ್ರತೆಗಳು

12-19 ಪಂಚರತ್ನ ಯೋಜನೆ

- ಶಿಕ್ಷಣವೇ ಆಧುನಿಕ ಶಕ್ತಿ
- ಆರೋಗ್ಯವೇ ಸಂಪತ್ತು
- ರೈತ ಚೈತನ್ಯ
- ವಸತಿ ಆಸರೆ
- ಯುವನವ ಮಾರ್ಗ ಮತ್ತು ಮಹಿಳಾ ಸಬಲೀಕರಣ

20-21 ಕೈಗಾರಿಕಾಭಿವೃದ್ಧಿ

22 ಸಾರಿಗೆ ಮತ್ತು ಪ್ರವಾಸೋದ್ಯಮ


23-26 ಜಲಧಾರೆ

27-29 ರಸ್ತೆ ಅಭಿವೃದ್ಧಿ-ಸಂಪರ್ಕ ಸೇತುವೆಗಳು

30 ಇಂಧನ ವಲಯ

31-34 ಆಡಳಿತ ಸುಧಾರಣೆ

35-36 ಕೃಷಿ ಮತ್ತು ಹೈನುಗಾರಿಕೆ





ಜನತಾದಳ (ಜಾ)ವು ದೇಶದಲ್ಲಿನ ತುರ್ತು ಪರಿಸ್ಥಿತಿಯ ಹೇರಿಕೆಯನ್ನು ವಿರೋಧಿಸಿ, ಸಂಘರ್ಷ ಮತ್ತು ಹೋರಾಟದಲ್ಲಿ ಜನಿಸಿದ ಜನತಾ ಪಕ್ಷದ ಉಳಿದಿರುವ ಒಂದು ಅಂಗ. ಈ ರಾಜ್ಯದಲ್ಲಿ 1983ರಲ್ಲಿ ಪ್ರಥಮ ಬಾರಿಗೆ ಜನತಾ ಪರಿವಾರ ಸರ್ಕಾರ ಅಧಿಕಾರ ವಹಿಸಿಕೊಂಡು ಹಲವಾರು ಜನಹಿತ ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ, ಜಾರಿಗೊಳಿಸಿದೆ. ತದನಂತರದಲ್ಲಿ ರಾಜ್ಯದ ಮುಖ್ಯಮಂತ್ರಿಗಳಾಗಿ ಹಾಗೂ ಭಾರತದ ಪ್ರಧಾನ ಮಂತ್ರಿಗಳಾಗಿ ಶ್ರೀ ಹೆಚ್.ಡಿ. ದೇವೇಗೌಡರು ಮತ್ತು

ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಗಳಾಗಿ ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರು ರಾಜ್ಯದ ಅಭಿವೃದ್ಧಿಗೆ ಅಪಾರ ಕೊಡುಗೆಗಳನ್ನು ನೀಡಿದ್ದಾರೆ. ರಾಷ್ಟ್ರ ಹಾಗೂ ರಾಜ್ಯ ರಾಜಕಾರಣದಲ್ಲಿ ದುರಾಡಳಿತ, ಲಂಚಗುಳಿತನ, ದ್ವೇಷ, ಅಸೂಯೆ, ಮತ್ತು ಕೋಮುವಾದಗಳು ತುಂಬಿತುಳುಕುತ್ತಿವೆ. ಇಂತಹ ವಿಷಮ ಪರಿಸ್ಥಿತಿಯಲ್ಲಿ ಕಳೆದ 2 ವರ್ಷಗಳಿಂದ ನಗರ ಸ್ಥಳೀಯ ಸಂಸ್ಥೆಗಳಿಗೆ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸದೆ ಇರುವುದರಿಂದ ಆಡಳಿತ ವ್ಯವಸ್ಥೆ ಕುಸಿದಿದೆ ಮತ್ತು ಅಭಿವೃದ್ಧಿ ಕಾಮಗಾರಿಗಳು ತೆರೆಮರೆಯಾಗಿವೆ.

ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಪಕ್ಷದ ವತಿಯಿಂದ ಜನತಾ ಪರ್ವ ಕಾರ್ಯಕ್ರಮವನ್ನು ರೂಪಿಸಲಾಗಿದೆ ಮತ್ತು ಜನತಾ ಪರ್ವ ಕಾರ್ಯಕ್ರಮದ ಅಡಿಯಲ್ಲಿ ಜನತಾ ಜಲಧಾರೆ, ಜನತಾ ಮಿತ್ರ ಮತ್ತು ಪಂಚರತ್ನ ಯೋಜನೆಗಳನ್ನು ರೂಪಿಸಲಾಗಿದೆ.

## ಜನತಾ ಜಲಧಾರೆ

### ರಾಜ್ಯದ ಸಮಗ್ರ ನೀರಾವರಿಗೆ ಮತ್ತು ಕುಡಿಯುವ ನೀರು ಪೂರೈಕೆಗೆ ನಮ್ಮ ದೃಢ ಸಂಕಲ್ಪ

ರಾಜ್ಯದ 94 ಪುಣ್ಯಕ್ಷೇತ್ರಗಳಲ್ಲಿ ಜಲ ಸಂಗ್ರಹಣೆ ಮಾಡಿದ ನಂತರ, ನೆಲಮಂಗಲದಲ್ಲಿ ದಿನಾಂಕ:13.05.2022 ರಂದು ನಡೆದ ಜನತಾ ಜಲಧಾರೆ ಬೃಹತ್ ಸಮಾರೋಪ ಸಮಾರಂಭದಲ್ಲಿ ಸರಿ ಸುಮಾರು 10 ಲಕ್ಷ ಜನತೆಯ ಸಮಕ್ಷಮದಲ್ಲಿ ಸಂಕಲ್ಪ ಮಾಡಿದಂತೆ, ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಸಮಗ್ರ ನೀರಾವರಿ ಯೋಜನೆಗಳ ಅನುಷ್ಠಾನ ಮತ್ತು ನಾಡಿನ ಜನತೆಗೆ ಶುದ್ಧ ಕುಡಿಯುವ ನೀರು ಸರಬರಾಜು ಹಾಗೂ ರೈತರ ಜಮೀನುಗಳಿಗೆ ಉತ್ತಮ ನೀರಾವರಿ ವ್ಯವಸ್ಥೆ ಮಾಡಲಾಗುವುದು.

### ಜನತಾ ಮಿತ್ರ

ಜನತೆಯ ನಿಜವಾದ ಕುಂದುಕೊರತೆಗಳನ್ನು ತಿಳಿಯುವ ಮತ್ತು ಮುಂದೆ ಬರುವ ಜನತಾ ಸರ್ಕಾರದದಲ್ಲಿ ನಾವು ಯಾವುದಕ್ಕೆ ಆದ್ಯತೆ ನೀಡಬೇಕು ಎಂದು ಬೆಂಗಳೂರು ನಗರದ ಜನರಿಂದ ಈಗಾಗಲೇ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದು, ಸುಮಾರು 80 ಸಾವಿರದಷ್ಟು ಜನರು ಮುಂದಿನ ಜನತಾ ಸರ್ಕಾರವು ಯಾವ ವಿಚಾರಕ್ಕೆ ಆದ್ಯತೆ ನೀಡಬೇಕೆಂದು ತಿಳಿಸಿದ್ದಾರೆ. ಇದನ್ನು ಮುಂದುವರೆಸಿ, ರಾಜ್ಯದ ಎಲ್ಲಾ ಜನತೆಯ ಅಭಿಪ್ರಾಯಗಳನ್ನು ಸಂಗ್ರಹಿಸಿ, ಮುಂಬರುವ ಸರ್ಕಾರವನ್ನು **'ಕರುನಾಡ ಜನಾಭಿಪ್ರಾಯ ಆಧಾರಿತ ಜನತಾ ಸರ್ಕಾರ'** ಮಾಡುವುದೇ ನಮ್ಮ ಗುರಿ.

### ಪಂಚರತ್ನ ಯೋಜನೆ

**ಐದು ಅಂಶಗಳುಳ್ಳ ಈ ಯೋಜನೆಯನ್ನು ಜಾರಿಗೆ ತರುವುದೇ ಮುಂಬರುವ ನಮ್ಮ ಸರ್ಕಾರದ ಗುರಿ. ಇದರ ಪ್ರಚಾರಕ್ಕಾಗಿ ಪಂಚರತ್ನ ರಥಯಾತ್ರೆಯು ರಾಜ್ಯದ 25 ಜಿಲ್ಲೆಗಳಿಂದ 102 ವಿಧಾನಸಭಾ ಕ್ಷೇತ್ರಗಳಲ್ಲಿ 103 ದಿನಗಳು ಚಲಿಸಿದ ಸಂದರ್ಭದಲ್ಲಿ ಪ್ರತಿ ಕ್ಷೇತ್ರದಲ್ಲೂ ಜನತೆ ಅಭೂತಪೂರ್ವವಾಗಿ ಸ್ವಾಗತಿಸಿ, ಪಕ್ಷವನ್ನು ಆಶೀರ್ವದಿಸಿದ್ದಾರೆ.**

**ಪಂಚರತ್ನ ಯೋಜನೆಯನ್ನು ಮನೆ ಮನೆಗಳಿಗೆ ತಲುಪಿಸಿ ಕರ್ನಾಟಕ ಜನತೆಯ ಮನದ ಅಂಗಳದಲ್ಲಿ ಈ ಮಹತ್ವಾಕಾಂಕ್ಷೆ ಯೋಜನೆಯನ್ನು ಸ್ಥಾಪಿಸುವುದು ನಮ್ಮ ಗುರಿ.**




**ಜನತಾ ಜಲಧಾರೆ – ಜನತಾ ಮಿತ್ರ - ಪಂಚರತ್ನ ರಥ ಯಾತ್ರೆ ಸಮಯದಲ್ಲಿ ಜನತೆಯಿಂದ ಸ್ವೀಕೃತವಾದ ಸಲಹೆ, ನಿರೀಕ್ಷೆ, ಅಪೇಕ್ಷೆಗಳನ್ನು ಆಧರಿಸಿ ಹಾಗೂ ಕರ್ನಾಟಕ ಸಮಗ್ರ ಅಭಿವೃದ್ಧಿಯ ಅಗತ್ಯತೆಗೆ ಅನುಗುಣವಾಗಿ ಜನತಾ ಪ್ರಣಾಳಿಕೆ ತಯಾರಿಸಲಾಗಿದೆ.**

**ಜನತಾ ಪ್ರಣಾಳಿಕೆ ತಯಾರಿಕೆ ಜವಾಬ್ದಾರಿಯನ್ನು ಶ್ರೀ ಬಿ.ಎಂ.ಫಾರೂಖ್, ವಿಧಾನ ಪರಿಷತ್ ಸದಸ್ಯರು ಇವರ ನೇತೃತ್ವದ ಸಮಿತಿ ಪರಿಣಾಮಕಾರಿ ರೀತಿ ಕಾರ್ಯ ನಿರ್ವಹಿಸಿ, ತಯಾರಿಸಿದೆ. ಸಮಿತಿಯ ಪರಿಶ್ರಮವನ್ನು ಶ್ಲಾಘಿಸಲಾಗಿದೆ.**

| | | |
|---|---|---|
| **(ಹೆಚ್.ಡಿ.ದೇವೇಗೌಡ)** | (C.M.IBRAHIM) **(ಸಿ.ಎಂ.ಇಬ್ರಾಹಿಂ)** | **(ಹೆಚ್.ಡಿ.ಕುಮಾರಸ್ವಾಮಿ)** |



# ಸಂಪಾದಕೀಯ

ಕರ್ನಾಟಕ ರಾಜ್ಯದ ರಾಜಕೀಯ ಇತಿಹಾಸದಲ್ಲಿ ಕರ್ನಾಟಕ ವಿಧಾನ ಸಭಾ ಚುನಾವಣೆ – 2023 ಒಂದು ಮಹತ್ವದ ತಿರುವು ಪಡೆಯಲಿದೆ. ಕರ್ನಾಟಕದ ಸರ್ವತೋಮುಖ ಅಭಿವೃದ್ಧಿ ಮತ್ತು ನಾಡಿನ ಜನತೆಯ ಆಶೋತ್ತರಗಳಿಗೆ ಸ್ಪಂದಿಸುವುದರೊಂದಿಗೆ ಕನ್ನಡ ನಾಡಲ್ಲಿ ಸರ್ವ ಜನಾಂಗದ ಶಾಂತಿಯ ತೋಟವನ್ನು ಸ್ಥಾಪಿಸಲು ಜಾತ್ಯತೀತ ಜನತಾ ದಳ ಕಟಿಬದ್ಧವಾಗಿದೆ.

ಶ್ರೀ ಹೆಚ್.ಡಿ. ದೇವೇಗೌಡರವರ ಮಾರ್ಗದರ್ಶನದಲ್ಲಿ ಈ ಹಿಂದೆ ರಾಜ್ಯದ ಎರಡು ಬಾರಿ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿ, ಪಡೆದ ಅನುಭವದ ಹಿನ್ನೆಲೆಯಲ್ಲಿ, ಶ್ರೀ ಹೆಚ್.ಡಿ. ಕುಮಾರಸ್ವಾಮಿ ಅವರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ “ಜನತಾ ಪರ್ವ” ಕಾರ್ಯಕ್ರಮವನ್ನು ರೂಪಿಸಿದ್ದಾರೆ ಮತ್ತು ಜನತಾ ಪರ್ವ ಕಾರ್ಯಕ್ರಮದ ಅಡಿಯಲ್ಲಿ ಜನತಾ ಜಲಧಾರೆ, ಜನತಾ ಮಿತ್ರ ಮತ್ತು ಪಂಚರತ್ನ ಯೋಜನೆಗಳನ್ನು ರೂಪಿಸಿ ರಾಜ್ಯದ ಉದ್ದ-ಅಗಲಕ್ಕೂ ಕಳೆದ ಆರು ತಿಂಗಳ ಕಾಲ ಸಂಚರಿಸಿ, ಕರ್ನಾಟಕ ಜನತೆಗೆ ತಲುಪಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ರಾಜ್ಯದ ಸಮಗ್ರ ಅಭಿವೃದ್ಧಿಗೆ ಜನತಾ ಪ್ರಣಾಳಿಕೆಯನ್ನು ತಯಾರಿಸಲಾಗಿದೆ. ಈ ಪ್ರಣಾಳಿಕೆ ತಯಾರಿಕೆಯಲ್ಲಿ ಮಹತ್ವದ ಯೋಜನೆ ಮತ್ತು ಕಾರ್ಯಕ್ರಮಗಳನ್ನು ರೂಪಿಸಿಕೊಟ್ಟ ಡಾ.ಎಸ್. ಸುಬ್ರಹ್ಮಣ್ಯ, ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಮಾಜಿ ಆರ್ಥಿಕ ಸಲಹೆಗಾರರು, ಕರ್ನಾಟಕ ಸರ್ಕಾರ ಇವರಿಗೆ ವಂದನೆಗಳನ್ನು ಸಲ್ಲಿಸಿದೆ. ಜನತಾ ಪ್ರಣಾಳಿಕೆ ತಯಾರಿಕೆಯಲ್ಲಿ ಶ್ರಮಿಸಿದ ಸಮಿತಿ ಸದಸ್ಯರಾದ ಶ್ರೀ ಬಂಡಪ್ಪ ಖಾಶೆಂಪೂರ, ಮಾನ್ಯ ವಿಧಾನಸಭಾ ಸದಸ್ಯರು, ಶ್ರೀ ಕುಪೇಂದ್ರರೆಡ್ಡಿ, ಮಾಜಿ ರಾಜ್ಯ ಸಭಾ ಸದಸ್ಯರು ಮತ್ತು ಶ್ರೀ ಕೆ.ಎ. ತಿಪ್ಪೇಸ್ವಾಮಿ, ವಿಧಾನಪರಿಷತ್ ಸದಸ್ಯರು ಇವರ ಕೊಡುಗೆಯನ್ನು ಸ್ಮರಿಸಲಾಗಿದೆ.

**ಬಿ.ಎಂ. ಫಾರೂಕ್**
ಸಂಪಾದಕರು | ಜನತಾ ಪ್ರಣಾಳಿಕೆ
ಮತ್ತು ಕರ್ನಾಟಕ ವಿಧಾನ ಪರಿಷತ್ ಸದಸ್ಯರು

# ಸಾಮಾಜಿಕ ಭದ್ರತೆಗಳು



## ಮಾತೃಶ್ರೀ ಯೋಜನೆ

- ಮಾತೃಶ್ರೀ ಮತ್ತು ಗರ್ಭಿಣಿ ತಾಯಂದಿರ ಅಗತ್ಯತೆ ಪೂರೈಕೆಗೆ **6** ತಿಂಗಳ ಕಾಲ **6** ಸಾವಿರ ರೂ. ಭತ್ಯೆ
- ಸ್ತ್ರೀಶಕ್ತಿ ಸ್ವಸಹಾಯ ಸಂಘಗಳ ಸಾಲ ಮನ್ನಾ
- ವಿಧವಾ ವೇತನ **900** ರೂ.ನಿಂದ **2,500** ರೂ.ಗಳಿಗೆ ಹೆಚ್ಚಳ




**ವರ್ಷಕ್ಕೆ ಐದು ಅಡುಗೆ ಅನಿಲ ಸಿಲಿಂಡರ್ ಉಚಿತ**

---

## ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆಗೆ ಪರಿಹಾರ



- ರಾಜ್ಯದಲ್ಲಿ ಒಟ್ಟು **66,361** ಅಂಗನವಾಡಿ ಕೇಂದ್ರಗಳಿದ್ದು, ಈ ಕೇಂದ್ರಗಳಲ್ಲಿ **64,729** ಕಾರ್ಯಕರ್ತೆಯರು ಮತ್ತು **59,627** ಸಹಾಯಕಿಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ.
- ಅಂಗನವಾಡಿ ಕಾರ್ಯಕರ್ತೆಯರಿಗೆ **11,000** ರೂ., ಸಹಾಯಕಿಯರಿಗೆ **6,500** ರೂ., ಮಿನಿ ಅಂಗನವಾಡಿ ಕಾರ್ಯಕರ್ತೆಯರಿಗೆ **7,500** ರೂ.ಗಳ ಗೌರವಧನ ಪಾವತಿಸಲಾಗುತ್ತಿದೆ.
- ಈ ಕಾರ್ಯಕರ್ತರ ಸೇವೆಯನ್ನು ಖಾಯಂಗೊಳಿಸಿ, ವೇತನ ನಿಗದಿಗೊಳಿಸಿ ಪ್ರತಿ ಕಾರ್ಯಕರ್ತೆಯರಿಗೆ ಮಾಸಿಕ ಹೆಚ್ಚುವರಿಯಾಗಿ **5000** ರೂ. ವೇತನ ಪಾವತಿಸಲಾಗುವುದು.
- ಅದೇ ರೀತಿ ಕನಿಷ್ಠ **15** ವರ್ಷ ಸೇವೆ ಸಲ್ಲಿಸಿ ನಿವೃತ್ತರಾದ ಕಾರ್ಯಕರ್ತೆಯರಿಗೆ ಪಿಂಚಣಿ ಯೋಜನೆ ಜಾರಿಗೊಳಿಸಲಾಗುವುದು.

## ರೈತಬಂಧು ಯೋಜನೆ



- ರಾಜ್ಯದಲ್ಲಿ 2015ರ ಕೃಷಿ ಗಣತಿಯಂತೆ **36,000** ಕೃಷಿ ಕಾರ್ಮಿಕರ ಕುಟುಂಬಗಳಿದ್ದು, ಪ್ರತಿ ಕೃಷಿ ಕಾರ್ಮಿಕ ಕುಟುಂಬಕ್ಕೆ ಪ್ರತಿ ತಿಂಗಳೂ **2,000** ರೂ.ನಂತೆ ಸಹಾಯಧನ ನೀಡಲಾಗುವುದು.
- ಬಿತ್ತನೆ ಬೀಜ ಹಾಗೂ ರಸಗೊಬ್ಬರ ಖರೀದಿಗೆ ಸಾಲ ಮಾಡದಂತೆ ರೈತರ ಪ್ರತಿ ಎಕರೆಗೆ ವಾರ್ಷಿಕ **10,000** ರೂ. ಸಹಾಯ ಧನ ಕೊಡಲಾಗುವುದು.
- ರೈತ ಯುವಕರನ್ನು ಮದುವೆಯಾಗುವ ಯುವತಿಯರಿಗೆ **2** ಲಕ್ಷ ರೂ. ಪ್ರೋತ್ಸಾಹ ಧನ ನೀಡಲಾಗುವುದು.



## ಸಾರಥಿಗೆ ಸೈ ಯೋಜನೆ

- ರಾಜ್ಯದಲ್ಲಿರುವ ಪ್ರತಿ ಆಟೋ ಚಾಲಕನಿಗೆ ಪ್ರತಿ ತಿಂಗಳು **2,000** ರೂಗಳ ಮಾಸಾಶನ.

## ರಕ್ಷಕ ಬಂಧು ಯೋಜನೆ

- ನೋಂದಾಯಿತ ಖಾಸಗಿ ಸೆಕ್ಯೂರಿಟಿ ಗಾರ್ಡ್‌ಗಳಿಗೆ ಪ್ರತಿ ತಿಂಗಳೂ **2,000** ರೂ. ಸಹಾಯಧನ ನೀಡಲಾಗುವುದು.

## ಹಿರಿ-ಸಿರಿ ಯೋಜನೆ

- ರಾಜ್ಯದಲ್ಲಿರುವ **57,91,032** ಹಿರಿಯ ನಾಗರಿಕರಲ್ಲಿ ಬಡತನ ರೇಖೆಗಿಂತ ಕೆಳಗಿರುವ **42,35,609** ಹಿರಿಯ ನಾಗರಿಕರ ಮಾಸಾಶನವನ್ನು **1,200** ರೂ.ನಿಂದ **5,000** ರೂ.ಗಳಿಗೆ ಹೆಚ್ಚಳ ಮಾಡಲಾಗುವುದು.

## ಚೈತನ್ಯ ಯೋಜನೆಗಳು



- ವಿರಳ ರೋಗಗಳಿಂದ ಬಳಲುತ್ತಿರುವ ರೋಗಿಗಳ ಚಿಕಿತ್ಸೆಗೆ ವಿಶೇಷ ಪರಿಹಾರವಾಗಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ **25** ಲಕ್ಷ ರೂ.ಗಳವರೆಗೆ ಪರಿಹಾರವನ್ನು **24** ಗಂಟೆಗಳ ಒಳಗಾಗಿ ನೀಡಲಾಗುವುದು.
- ರಾಜ್ಯದಲ್ಲಿ ಒಟ್ಟು **13,24,205** ವಿಕಲಚೇತನರಿದ್ದು, ಪ್ರಸ್ತುತ ಅವರಿಗೆ ನೀಡಲಾಗುತ್ತಿರುವ **600** ರೂ.ಗಳ ಪಿಂಚಣಿಯನ್ನು **2,500** ರೂ.ಗಳಿಗೆ ಹೆಚ್ಚಿಸಲಾಗುವುದು.

## ಸಾರಿಗೆ ನೌಕರರ ಬೇಡಿಕೆ ಈಡೇರಿಕೆ

- ಸಾರಿಗೆ ಸಂಸ್ಥೆ ನೌಕರರು ಅಗತ್ಯ ಸೇವಾ ನಿರ್ವಹಣೆ (ESMA) ಕಾಯಿದೆ ಅಡಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ವೇತನ ಆಯೋಗ ಜಾರಿಯಾದಾಗ ಯಥಾವತ್ತು ಅಳವಡಿಸಿಕೊಂಡು ನಗದುರಹಿತ ವೈದ್ಯಕೀಯ ಸವಲತ್ತುಗಳನ್ನು ನೀಡಲಾಗುವುದು.



## ವೃತ್ತಿನಿರತ ವಕೀಲರ ರಕ್ಷಣೆಗೆ ಕಾಯ್ದೆ

- ನ್ಯಾಯಾಲಯಗಳಲ್ಲಿ ಕಕ್ಷಿದಾರರ ಪರ ವಕಾಲತ್ತು ವಹಿಸಿ, ವೃತ್ತಿಪರ ನ್ಯಾಯದಂತೆ ಕಕ್ಷಿದಾರರಿಗೆ ನ್ಯಾಯ ಒದಗಿಸಲು ಶ್ರಮಿಸುವ ಸಂದರ್ಭದಲ್ಲಿ ಎದುರು ಕಕ್ಷಿದಾರರಿಂದ ಕೆಲವೊಮ್ಮೆ ಹಲ್ಲೆಗೆ ಒಳಗಾಗುತ್ತಾರೆ. ಕೆಲ ಸಂದರ್ಭದಲ್ಲಿ ವಕೀಲರ ಹತ್ಯೆಯೂ ಆಗುತ್ತದೆ.
- ಆದ್ದರಿಂದ ವೃತ್ತಿಪರ ವಕೀಲರ ರಕ್ಷಣೆಗಾಗಿ ಕಾಯಿದೆ ಒಂದನ್ನು ಜಾರಿಗೊಳಿಸಲಾಗುವುದು.
- ನೂತನವಾಗಿ ನೋಂದಾಯಿತ ವಕೀಲರಿಗೆ ಈಗ ನೀಡುವ ಮಾಸಿಕ ಭತ್ಯೆ (Stipend) ಯನ್ನು 2,000 ಸಾವಿರ ದಿಂದ 3,000 ರೂ.ಗಳಿಗೆ ಹೆಚ್ಚಿಸಲಾಗುವುದು.
- ನೋಂದಾಯಿತ ವಕೀಲರಿಗೆ 'ನ್ಯಾಯ ಕವಚ' ವಿಮಾ ಯೋಜನೆಯನ್ನು ಪರಿಣಾಕಾರಿಯಾಗಿ ಜಾರಿಗೊಳಿಸಲಾಗುವುದು.
- ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿರುವ ವಕೀಲರ ಸಂಘಗಳಿಗೆ ವಾರ್ಷಿಕ ಅನುದಾನ ಹೆಚ್ಚಿಸಲಾಗುವುದು.

## ಧಾರ್ಮಿಕ ಅಲ್ಪಸಂಖ್ಯಾತರ ಏಳಿಗೆ, ಸಾಮಾಜಿಕ ನ್ಯಾಯ ಮತ್ತು ಮೀಸಲಾತಿ



- ರಾಜ್ಯದ ಜನಸಂಖ್ಯೆಯ ಶೇ.20ರಷ್ಟಿರುವ ಧಾರ್ಮಿಕ ಅಲ್ಪಸಂಖ್ಯಾತರ ಏಳಿಗೆಗಾಗಿ (ಬೌದ್ಧ ಜೈನ, ಇಸ್ಲಾಂ, ಕ್ರೈಸ್ತ, ಸಿಖ್ ಮತ್ತು ಪಾರ್ಸಿ) ಬಜೆಟ್'ನಲ್ಲಿ ಪ್ರತಿ ವರ್ಷ ಶೇ.5ರಷ್ಟು ಅನುದಾನ ಮೀಸಲಿಡಲಾಗುವುದು.
- ಕೋಮು ವೈಷಮ್ಯ ಹರಡುವವರ ವಿರುದ್ಧ ಕಠಿಣ ಕ್ರಮ ಮತ್ತು ಪ್ರಕರಣಗಳ ಕ್ಷಿಪ್ರ ತನಿಖೆಗೆ ಕ್ಷಿಪ್ರ ವಿಚಾರಣಾ ನ್ಯಾಯಾಲಯ ಸ್ಥಾಪನೆ ಮಾಡಲಾಗುವುದು.
- ಕೋಮು ಸೌಹಾರ್ದ ಪ್ರಚಾರಕ್ಕೆ ಶ್ರಮಿಸುವ ಸಂಘಸಂಸ್ಥೆಗಳಿಗೆ ವಿಶೇಷ ಪ್ರೋತ್ಸಾಹ.
- ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ಬಾರದಂತೆ ಮದರಸಾಗಳಲ್ಲಿ ಆಧುನಿಕ ಶಿಕ್ಷಣ ಮತ್ತು ವೈಜ್ಞಾನಿಕ ಶಿಕ್ಷಣಕ್ಕೆ ಒತ್ತು ನೀಡಲಾಗುವುದು.
- ಬೌದ್ಧ ಚೈತ್ಯಾಲಯ, ಜೈನ ಬಸದಿ, ಮಸೀದಿ, ಚರ್ಚುಗಳ ರಕ್ಷಣೆ ಮತ್ತು ಜೀರ್ಣೋದ್ಧಾರಕ್ಕೆ ವಿಶೇಷ ಯೋಜನೆ ಮಾಡಲಾಗುವುದು.
- ನ್ಯಾ.ರಾಜೇಂದರ್ ಸಾಚಾರ್ ವರದಿಯಲ್ಲಿರುವ ಶಿಫಾರಸುಗಳ ಅನುಷ್ಠಾನ ಕುರಿತು ಅಧ್ಯಯನ ನಡೆಸಲು ಸಮಿತಿ ರಚಿಸಲಾಗುವುದು.
- ರಾಜ್ಯದಲ್ಲಿನ ವಕ್ಫ್ ಆಸ್ತಿ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಉನ್ನತ ಮಟ್ಟದ ಸಮಿತಿ ರಚನೆಗೆ ಅಗತ್ಯ ಅನುದಾನ ನೀಡಿಕೆ
- ಅಶಕ್ತ ಪುರುಷ ಮತ್ತು ಅಬಲೆಯರ ಆಶ್ರಯಕ್ಕೆ 'ಸಹಾರಾ' ಯೋಜನೆ ಜಾರಿ ಮಾಡಲಾಗುವುದು.

## ಮೀಸಲಾತಿ ಗೊಂದಲ ನಿವಾರಣೆ




- ರಾಜ್ಯ ಸರಕಾರ ಇತರೆ ಹಿಂದುಳಿದ ವರ್ಗದಲ್ಲಿ ಸೇರ್ಪಡೆಯಾಗಿರುವ ಮುಸ್ಲಿಂರಿಗೆ ನೀಡಿರುವ ಶೇ.4ರಷ್ಟು ಮೀಸಲಾತಿಯನ್ನು ರದ್ದುಪಡಿಸಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಮುಸ್ಲಿಂ ಸಮುದಾಯವನ್ನು ಶೇ.10ರಷ್ಟು ಮೀಸಲಾತಿ ಹೊಂದಿರುವ ಆರ್ಥಿಕವಾಗಿ ಹಿಂದುಳಿದ ವರ್ಗದವರೊಂದಿಗೆ ಸೇರಿಸಲಾಗಿದೆ.
- ಈ ರೀತಿ ಹಿಂದುಳಿದ ವರ್ಗಗಳ ಹೊಸ ಮೀಸಲಾತಿ ವ್ಯವಸ್ಥೆಗೆ ಹಿಂದುಳಿದ ಆಯೋಗದಿಂದ ಸರಕಾರ ವರದಿ ಪಡೆದಿಲ್ಲ.
- ಮುಸ್ಲಿಂ ಸಮುದಾಯಕ್ಕೆ ದೊರೆಯಬೇಕಾಗಿರುವ ಶೇ.4ರಷ್ಟು ಮೀಸಲಾತಿಯನ್ನು ಮರು ಸ್ಥಾಪಿಸಲು ನಮ್ಮ ಪಕ್ಷ ಕಟಿಬದ್ಧವಾಗಿದೆ.

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಏಳಿಗೆ & ಅಭಿವೃದ್ಧಿ

- ರಾಜ್ಯ ಸರಕಾರ ನ್ಯಾಯಮೂರ್ತಿ ಸದಾಶಿವ ಆಯೋಗದ ಶಿಫಾರಸುಗಳನ್ನು ಕಡೆಗಣಿಸಿ, ಪರಿಶಿಷ್ಟ ಜಾತಿಯ ಒಳ ಮೀಸಲಾತಿಯನ್ನು ವಿಂಗಡಿಸಿ, ಸರಕಾರಿ ಆದೇಶ ಹೊರಡಿಸಿ, ಗೊಂದಲ ಸೃಷ್ಟಿ ಮಾಡಿದೆ. ಈ ಒಳ ಮೀಸಲಾತಿ ವಿರುದ್ಧ ಹಲವಾರು ಪರಿಶಿಷ್ಟ ಜಾತಿಗಳು ಪ್ರತಿಭಟನೆ ನಡೆಸಿ ಈ ಗೊಂದಲಕ್ಕೆ ತೆರೆ ಎಳೆಯಲು ನ್ಯಾ.ಸದಾಶಿವ ಆಯೋಗದ ಶಿಫಾರಸುಗಳನ್ನು ಯಥಾವತ್ತಾಗಿ ಅನುಷ್ಠಾನಗೊಳಿಸಲಾಗುವುದು.
- ಪಂಚಾಯತ್ ರಾಜ್ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಹಲವಾರು ವರ್ಷಗಳಿಂದ ಖಾಲಿ ಇರುವ ಸಫಾಯಿ ಕರ್ಮಚಾರಿ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
- ರಾಜ್ಯದಲ್ಲಿ ಅನುಷ್ಠಾನದಲ್ಲಿರುವ ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ ಮನೆ ಹಂಚಿಕೆಯಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಶೇ.50 ರಿಯಾಯಿತಿ ದರದಲ್ಲಿ ಹಂಚಿಕೆ ಮಾಡಲಾಗುವುದು.
- ಕೆ.ಎಸ್.ಎಫ್.ಸಿ. ಪ್ರಸ್ತುತ ಶೇ.4ರಷ್ಟು ಬಡ್ಡಿ ವಿಧಿಸುತ್ತಿದ್ದು, ಇದಕ್ಕೆ ಇನ್ನಷ್ಟು ಸಬ್ಸಿಡಿ ನೀಡಿ ಎಸ್.ಸಿ/ಎಸ್.ಟಿ. ಉದ್ದಿಮೆದಾರರಿಗೆ ಬಡ್ಡಿ ದರವನ್ನು ಶೇ.4ರಿಂದ ಶೇ.2ಕ್ಕೆ ಇಳಿಸಲಾಗುವುದು.
- ಎಸ್.ಸಿ/ಎಸ್.ಟಿ. ಉದ್ದಿಮೆದಾರರು/ಗುತ್ತಿಗೆದಾರರಿಗೆ ಶೇ.2 ಬಡ್ಡಿ ದರದಲ್ಲಿ 5 ಕೋಟಿ ರೂ.ವರೆಗೆ ಬಂಡವಾಳ ಒದಗಿಸಲಾಗುವುದು.

## ಬಗರ್ ಹುಕುಂ ಸಾಗುವಳಿ

- ಬಗರ್ ಹುಕುಂ ಸಾಗುವಳಿಯನ್ನು ಖಾಯಂ ಮಾಡಿ, ಬಡ ಉಳುಮೆದಾರರಿಗೆ ಮಂಜೂರು ಮಾಡಿ ಹಕ್ಕು ಪತ್ರ ವಿತರಿಸಲಾಗುವುದು
- ಇತ್ತೀಚಿನ ದಿನಗಳಲ್ಲಿ ಮಾನವ -ವನ್ಯ ಜೀವಿಗಳ ಸಂಘರ್ಷ ಹೆಚ್ಚಿದ್ದು, ಈ ಸಂಘರ್ಷಕ್ಕೆ ಶಾಶ್ವತ ಪರಿಹಾರ ಮತ್ತು ನೊಂದ ಸಂತ್ರಸ್ತ ಕುಟುಂಬಗಳಿಗೆ ಪರಿಹಾರದೊಂದಿಗೆ ಉದ್ಯೋಗ ಭದ್ರತೆ.

## ರಾಷ್ಟ್ರೀಯ ಪಿಂಚಣಿ ಯೋಜನೆ v/s ಹಳೆಯ ಪಿಂಚಣಿ ಯೋಜನೆ



- ದಿನಾಂಕ: **01.04.2006**ರಂದು ಮತ್ತು ತದನಂತರ ಸರಕಾರಿ ಸೇವೆಗೆ ಸೇರುವ ನೌಕರರಿಗೆ ಅನ್ವಯವಾಗುವ ರಾಷ್ಟ್ರೀಯ ಪಿಂಚಣಿ ಯೋಜನೆಯ ಅನುಷ್ಠಾನವನ್ನು ಮರು ಪರಿಶೀಲಿಸಲಾಗುವುದು.
- ಹೊಸ ಯೋಜನೆಯಲ್ಲಿ ನಿವೃತ್ತ ನೌಕರರಿಗೆ ಅಥವಾ ಕುಟುಂಬಕ್ಕೆ ನೀಡುವ ಪಿಂಚಣಿ ಅವರ ಗೌರವಾನ್ವಿತ ನಿವೃತ್ತಿ ಜೀವನ ನಡೆಸಲು ಸಾಧ್ಯವಾಗದು ಎಂಬುದು ಕಟು ಸತ್ಯ.
- ಈ ದಿಶೆಯಲ್ಲಿ ರಾಜ್ಯ-ಕೇಂದ್ರ ಸರ್ಕಾರಗಳ ರಾಷ್ಟ್ರೀಯ ಮತ್ತು ಹಳೇ ಪಿಂಚಣಿ ಯೋಜನೆಯಲ್ಲಿರುವ ಉತ್ತಮ ಅಂಶಗಳನ್ನು ಒಳಗೊಂಡಿರುವ ಸುಧಾರಿತ ಪಿಂಚಣಿ ಯೋಜನೆಯನ್ನು ತರಲಾಗುವುದು.
- ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಿಂಚಣಿ ಯೋಜನೆಯನ್ನು ಪರಾಮರ್ಶಿಸಿ, ಸೂಕ್ತ ಬದಲಾವಣೆಗಳನ್ನು ಹೊಸ ಪಿಂಚಣಿ ಯೋಜನೆಯಲ್ಲಿ ತಂದು ನಿವೃತ್ತ ನೌಕರರು ಗೌರವಾನ್ವಿತ ನಿವೃತ್ತ ಜೀವನವನ್ನು ನಡೆಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು.

## ಗ್ರಹಣ ಹಿಡಿದಿರುವ ಋತು ಯೋಜನೆಗೆ ಕಾಯಕಲ್ಪ



- ಕೇಂದ್ರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಾಲಯದಿಂದ ಮುಟ್ಟಿನ ನೈರ್ಮಲ್ಯ ನಿರ್ವಹಣೆ ಯೋಜನೆ-ಋತು ಯೋಜನೆಯಡಿ ರಾಜ್ಯ ಸರಕಾರಿ ಮತ್ತು ಅನುದಾನಿತ ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ಹದಿಹರೆಯದ ಹೆಣ್ಣುಮಕ್ಕಳಿಗೆ ಉಚಿತವಾಗಿ ನೀಡುವ ಸ್ಯಾನಿಟರಿ ನ್ಯಾಪ್‌ಕಿನ್‌ಗಳು ಕಳೆದ **3** ವರ್ಷಗಳಿಂದ ಸಮರ್ಪಕವಾಗಿ ವಿತರಣೆಯಾಗದೆ ನೆನೆಗುದಿಗೆ ಬಿದ್ದಿದೆ.
- ಶೇ.**20**ರಷ್ಟು ಹೆಣ್ಣು ಮಕ್ಕಳು ಮುಟ್ಟಿನ ನೈರ್ಮಲ್ಯದ ಅರಿವು ಇಲ್ಲದೆ ಪೋಷಕರ ಮತ್ತು ಶಿಕ್ಷಕರ ಸಮಾಲೋಚನೆ ಇಲ್ಲದೆ ಶಾಲಾ ಕಾಲೇಜುಗಳಿಂದ ದೂರ ಉಳಿದಿದ್ದಾರೆ.
- ಈ ಋತು ಯೋಜನೆಯನ್ನು ಒಂದು ವಿಶೇಷ ಯೋಜನೆಯನ್ನಾಗಿ ಅನುಷ್ಠಾನಗೊಳಿಸಿ, ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಯನ್ನು ನಿಯತಕಾಲಿಕವಾಗಿ ವಿತರಣೆ ಮಾಡಲು ಸುಗಮ ವ್ಯವಸ್ಥೆ ರೂಪಿಸಲಾಗುವುದು.

# ಕನ್ನಡ ಮತ್ತು ಸಂಸ್ಕೃತಿ



## ಕನ್ನಡನಾಡಿನಲ್ಲಿರುವ ಭಾಷೆಗಳ ಮತ್ತು ಸಂಸ್ಕೃತಿ ಸಂರಕ್ಷಣೆ ಮತ್ತು ಅಭಿವೃದ್ಧಿ

- ಕನ್ನಡ ಮತ್ತು ಕನ್ನಡ ಸಂಸ್ಕೃತಿಯನ್ನು ಉಳಿಸಿ, ಬೆಳೆಸಿ, ಅಭಿವೃದ್ಧಿಪಡಿಸಲು ಅಗತ್ಯವಿರುವ ಅನುದಾನವನ್ನು ಪ್ರತಿ ವರ್ಷ ಆಯವ್ಯಯದಲ್ಲಿ ನೀಡಲಾಗುವುದು.
- ಕನ್ನಡ ನಾಡಿನಲ್ಲಿರುವ ತುಳು, ಕೊಂಕಣಿ, ಲಂಬಾಣಿ, ಕೊಡವ, ಅರೆಭಾಷೆ, ಹವ್ಯಕ, ಬ್ಯಾರಿ ಭಾಷೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ವಿಶೇಷ ಯೋಜನೆ ಅಡಿಯಲ್ಲಿ ಅನುದಾನ ಮತ್ತು ಅಗತ್ಯವಿರುವ ಬೆಂಬಲ ನೀಡಲಾಗುವುದು ಹಾಗೂ ಈ ಭಾಷೆಗಳ ನಡುವೆ ಸಾಮರಸ್ಯ ಮತ್ತು ಹೊಂದಾಣಿಕೆಗೆ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಲಾಗುವುದು.
- ರಾಜ್ಯದಲ್ಲಿ ಪ್ರವರ್ಗ 'ಸಿ' ಯಲ್ಲಿ ಅಧಿಸೂಚಿತವಾಗಿರುವ **34223** ದೇವಸ್ಥಾನಗಳಿಗೆ ಪ್ರತಿ ವರ್ಷ ನೀಡುವ **60** ಸಾವಿರ ರೂ.ಗಳ ತಸ್‌ಧಿಕ್ ಮೊತ್ತವನ್ನು **1** ಲಕ್ಷ ರೂ.ಗಳಿಗೆ ಏರಿಸಲಾಗುವುದು.
- ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ-ಮಾನ ದೊರೆತಿದ್ದು ಭಾಷಾ ಅಭಿವೃದ್ಧಿಗೆ ಅಗತ್ಯವಿರುವ ಎಲ್ಲಾ ನೆರವು, ಸವಲತ್ತು ಮತ್ತು ಸಹಾಯಗಳನ್ನು ಆದ್ಯತೆ ಮೇಲೆ ನೀಡಲಾಗುವುದು.
- ಕೇಂದ್ರ ಸರ್ಕಾರ ಒಂದೆಡೆ ಹಿಂದಿ ಭಾಷೆಯನ್ನು ಕನ್ನಡಿಗರ ಮೇಲೆ ಹೇರುತ್ತಿದ್ದು, ಇನ್ನೊಂದೆಡೆ ಕನ್ನಡ ವಿರೋಧಿ ನೀತಿಯನ್ನು ಅನುಸರಿಸುತ್ತಿದೆ.
- ಕೇಂದ್ರ ಸರಕಾರ ನಾಗರೀಕ ಸೇವೆಗಳಾದ ರೈಲ್ವೆ ಸೇವೆ, ಬ್ಯಾಕಿಂಗ್, ರಾಜ್ಯದಲ್ಲಿರುವ ಕೇಂದ್ರ ಸಾರ್ವಜನಿಕ ಉದ್ಯಮಗಳು, ಕೇಂದ್ರ ಭದ್ರತಾ ಪಡೆ ಮುಂತಾದವುಗಳ ನೇಮಕಾತಿಯಲ್ಲಿ ಕನ್ನಡದಲ್ಲಿ ಪರೀಕ್ಷೆ ನಡೆಸಿ ಕನ್ನಡಿಗರಿಗೆ ಆದ್ಯತೆ ನೀಡಲು ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಲಾಗುವುದು.
- ಖಾಸಗಿ ವಲಯ ಉದ್ಯಮಗಳಲ್ಲಿ ಕನ್ನಡಿಗರಿಗೆ ಉದ್ಯೋಗ ಮೀಸಲಾತಿಗಾಗಿ ಅಗತ್ಯ ಕಾಯಿದೆಯನ್ನು ಜಾರಿಗೊಳಿಸಲಾಗುವುದು.

## ಆರಕ್ಷಕರಿಗೆ ಅಭಯ

- ಔರಾದ್ಕರ್ ಸಮಿತಿ ವರದಿಯಲ್ಲಿ ಪೊಲೀಸ್ ಅಧಿಕಾರಿಗಳಿಗೆ ಮತ್ತು ಸಿಬ್ಬಂದಿಗೆ ನೀಡುವ ವೇತನ, ಸೌಲಭ್ಯಗಳಲ್ಲಿ ನ್ಯೂನ್ಯತೆಗಳಿದ್ದು ಈ ತಾರತಮ್ಯವನ್ನು ಹೋಗಲಾಡಿಸಿ ನ್ಯಾಯಯುತ ವೇತನ ಮತ್ತು ಸೌಲಭ್ಯಗಳನ್ನು ಒದಗಿಸಲಾಗುವುದು.

## ಕಲಾ ಪ್ರೋತ್ಸಾಹ

- ಕಲಾವಿದರನ್ನು ವಸತಿ ಯೋಜನೆಯಡಿ ವಿಶೇಷ ಘಟಕಕ್ಕೆ ಸೇರಿಸಿ ವಸತಿ, ನಿವೇಶನ ಸೌಕರ್ಯ ಒದಗಿಸಲಾಗುವುದು.
- ಕಲಾವಿದರ ಮಾಶಾಸನವನ್ನು ಹಾಲಿ ಇರುವ ರೂ. **2000** ದಿಂದ ರೂ. **4000**ಕ್ಕೆ ಹೆಚ್ಚಿಸಲಾಗುವುದು.

## ಆಯುಷ್ ವೈದ್ಯರಿಗೆ ಅಭಯ

- ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಆರ್.ಬಿ.ಎಸ್.ಕೆ. ಯೋಜನೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಿ.ಎ.ಎಂ.ಎಸ್. ವೈದ್ಯರಿಗೆ ನೀಡುವ ವೇತನದಲ್ಲಿರುವ ತಾರತಮ್ಯವನ್ನು ಬಗೆಹರಿಸಲಾಗುವುದು.

## ಸ್ವರ್ಣ ಕುಟೀರ ಯೋಜನೆ

- ಕಾಡುಗೊಲ್ಲ ಮತ್ತು ಗೊಲ್ಲ ಸಮುದಾಯಗಳ ಸಂಪ್ರದಾಯ ಮತ್ತು ನಂಬಿಕೆಗೆ ಅನುಗುಣವಾಗಿ ಗೊಲ್ಲರಹಟ್ಟಿ ಮತ್ತು ಗ್ರಾಮಗಳಲ್ಲಿ ಹೆಣ್ಣು ಮಕ್ಕಳು ಋತುಮತಿ ಹೊಂದಿದ ಸಮಯದಲ್ಲಿ ಮಹಿಳೆಯರು ಮುಟ್ಟು ಹೊಂದುವ ಸಮಯದಲ್ಲಿ ಹಾಗೂ ಗರ್ಭಿಣಿ ತಾಯಿ ಮಗುವಿಗೆ ಜನನ ನೀಡಿದ ಸಮಯದಲ್ಲಿ, ಹಟ್ಟಿಯಿಂದ ಹೊರ ಉಳಿಯುವ ಇವರ ಸುರಕ್ಷತೆ ಮತ್ತು ಅನುಕೂಲಕ್ಕಾಗಿ ಪ್ರತಿ ಗೊಲ್ಲರಹಟ್ಟಿ ಮತ್ತು ಗ್ರಾಮಗಳಲ್ಲಿ ಒಂದು ಸ್ವರ್ಣ ಕುಟೀರವನ್ನು ನಿರ್ಮಿಸಲಾಗುವುದು.

# ಪಂಚರತ್ನ ಯೋಜನೆ






"ಕಳೆದ ವರ್ಷ ನವೆಂಬರ್ 18ರಂದು ಮುಳಬಾಗಿಲು ಕ್ಷೇತ್ರದ ಪುಣ್ಯಕ್ಷೇತ್ರ, ಶ್ರೀ ಕುರುಡುಮಲೆಯಿಂದ ಆರಂಭವಾದ ಪಂಚರತ್ನ ರಥಯಾತ್ರೆ, ನಾಡಿನ ಜನತಂತ್ರ ವ್ಯವಸ್ಥೆಯ ಇತಿಹಾಸದಲ್ಲಿಯೇ ಒಂದು ಮೈಲುಗಲ್ಲು. ಒಂದು ವೇಳೆ ಕುಮಾರಸ್ವಾಮಿ ಅವರು ರಾಜ್ಯದಲ್ಲಿ ಪಂಚರತ್ನ ಯೋಜನೆಗಳನ್ನು ಜಾರಿ ಮಾಡಿದರೆ, ರಾಜ್ಯ ಸ್ವರ್ಗಸದೃಶವಾಗುತ್ತದೆ ಎಂದು ಮಾಧ್ಯಮಗಳೇ ಬರೆದಿವೆ. ನನ್ನ ಆಚಲತೆ, ಪ್ರಾಮಾಣಿಕತೆ, ಬದ್ಧತೆಯನ್ನು ಕನ್ನಡನಾಡಿನ ಜನರು ಬಲ್ಲರು. ಈ ಬಾರಿ ಜನತಾ ಸರಕಾರ ಬರುವುದರಲ್ಲಿ ಅನುಮಾನವೇ ಇಲ್ಲ.

**ಹೆಚ್.ಡಿ.ಕುಮಾರಸ್ವಾಮಿ**
ಮಾಜಿ ಮುಖ್ಯಮಂತ್ರಿಗಳು

# ಶಿಕ್ಷಣವೇ ಆಧುನಿಕ ಶಕ್ತಿ



ಶಿಕ್ಷಣವೇ ಆಧುನಿಕ ಶಕ್ತಿ ಸೂತ್ರದಡಿಯಲ್ಲಿ ರಾಜ್ಯದ **6006** ಗ್ರಾಮ ಪಂಚಾಯಿತಿಗಳಲ್ಲಿ ಮುಂದಿನ ಐದು ವರ್ಷಗಳಲ್ಲಿ ಪ್ರತೀ ಪಂಚಾಯಿತಿಗೆ ಒಂದರಂತೆ ಹೈಟೆಕ್ ಸರಕಾರಿ ಶಾಲೆಗಳನ್ನು ಸ್ಥಾಪಿಸಲಾಗುವುದು. ಈ ಸುಸಜ್ಜಿತ ಶಾಲೆಗಳು ಈ ಕೆಳಗಿನ ಸೌಕರ್ಯಗಳನ್ನು ಒಳಗೊಂಡಿರುತ್ತವೆ.

- ಡಿಜಿಟಲ್ ತರಗತಿ
- ಕಂಪ್ಯೂಟರ್ ಲ್ಯಾಬ್
- ಆಧುನಿಕ ವಿಜ್ಞಾನ ಪ್ರಯೋಗಾಲಯ
- ಉತ್ತಮ ಗ್ರಂಥಾಲಯ
- ಆಧುನಿಕ ಸಭಾಂಗಣ
- ವಿಶಾಲವಾದ ಆಟದ ಮೈದಾನ
- ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ ಆದ್ಯತೆ
- ಪೂರಕ ಪಠ್ಯೇತರ ಚಟುವಟಿಕೆಗಳು
- ನುರಿತ ಶಿಕ್ಷಕ ವರ್ಗ
- ರಾಜ್ಯದಲ್ಲಿ **6006** ಗ್ರಾಮ ಪಂಚಾಯಿತಿಗಳಲ್ಲಿ ಪ್ರತಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಒಂದು ಸಾರ್ವಜನಿಕ ಶಾಲೆ ಸ್ಥಾಪನೆ ಗುರಿಯಿದ್ದು, ಒಂದು ಶಾಲೆ ನಿರ್ಮಾಣಕ್ಕೆ ಸರಾಸರಿ ರೂ.**4.60** ಕೋಟಿ ವೆಚ್ಚವಾಗಲಿದ್ದು, ಪ್ರತಿ ವರ್ಷ **1200** ಶಾಲೆಗಳಂತೆ ಮುಂದಿನ **5** ವರ್ಷಗಳಲ್ಲಿ **6** ಸಾವಿರ ಸಾರ್ವಜನಿಕ ಶಾಲೆಗಳನ್ನು ಸ್ಥಾಪಿಸಲಾಗುವುದು.

## ವಿದ್ಯಾ ಸ್ನೇಹಿ ಯೋಜನೆ

- ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ **6.8** ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಸೈಕಲ್‌ಗಳನ್ನು ವಿತರಿಸಲಾಗುವುದು.
- ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಮತ್ತು ಆರ್ಥಿಕವಾಗಿ ಹಿಂದುಳಿದಿರುವ ಹಾಗೂ **18** ವರ್ಷ ತುಂಬಿರುವ **60** ಸಾವಿರ ವಿದ್ಯಾರ್ಥಿನಿಯರಿಗೆ ವಿದ್ಯುತ್ ಚಾಲಿತ ಮೊಪೆಡ್ ವಿತರಣೆ ಮಾಡಲಾಗುವುದು.
- ಆರ್ಥಿಕವಾಗಿ ಹಿಂದುಳಿದ ಕುಟುಂಬಕ್ಕೆ ಸೇರಿದ ಪದವಿ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಪ್ರತಿಯೊಬ್ಬ ವಿದ್ಯಾರ್ಥಿಗೆ ಉಚಿತ ಪ್ರವೇಶದೊಂದಿಗೆ ವಿದ್ಯಾಭ್ಯಾಸ ನೀಡಲಾಗುವುದು.





## ಅಡಿಪಾಯ: ಅಂಗನವಾಡಿಗಳ ಬಲವರ್ಧನೆ

- ಕರ್ನಾಟಕ ರಾಜ್ಯದ ಅಂಗನವಾಡಿ ಸಂಸ್ಥೆಗಳನ್ನು ವಿಶಿಷ್ಟ ಮತ್ತು ಪರಿಣಾಮಕಾರಿ ರೀತಿಯಲ್ಲಿ ಬಲವರ್ಧನೆ ಮಾಡಲಾಗುವುದು. ಬ್ಲಾಕ್ ಮತ್ತು ಪ್ರಾಜೆಕ್ಟ್ ಮಟ್ಟದ ತರಬೇತಿ ವ್ಯವಸ್ಥೆಯ ಮೂಲಕ ಇದನ್ನು ಸಾಕಾರಗೊಳಿಸಲಾಗುವುದು ಮತ್ತು ಪೂರ್ವ ಶಾಲೆಗಳು ಮತ್ತು ಶಾಲೆಗಳ ಮೂಲಭೂತ ಸೌಕರ್ಯಗಳನ್ನು ಸಕ್ಷಮಗೊಳಿಸಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (MGNREGA)) ಮತ್ತು ಜಲ ಜೀವನ್ ಮಿಷನ್ (JMM) ಅನ್ನು ಬಳಸಿಕೊಳ್ಳುವುದು.
- ತರಬೇತಿಯನ್ನು ಬಲಪಡಿಸಲು ಟಿ-ಸ್ಯಾಟ್ ಪ್ರೋಗ್ರಾಂ ಅಳವಡಿಸಲಾಗುವುದು.
- ಅಪೌಷ್ಟಿಕ ಮಕ್ಕಳ ಮೇಲ್ವಿಚಾರಣೆ ಮತ್ತು ಅಪೌಷ್ಟಿಕತೆ ನಿವಾರಣೆಗಾಗಿ ಪೋಷಣ್ ಅಭಿಯಾನ ಅಡಿಯಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಲಾಗುವುದು.

## ಶಿಕ್ಷಣ ಮತ್ತು ಆಧುನಿಕ ಶಕ್ತಿ

- ಭಾರತ ಸರ್ಕಾರದ ಫೇಮ್-2 ಯೋಜನೆಯಡಿ ಲಭ್ಯವಾಗುವ 40+1 ಆಸನ ಸಮರ್ಥ್ಯದ 100 ನಾನ್-ಎಸಿ ಎಲೆಕ್ಟ್ರಿಕ್ ಬಸ್ಸುಗಳನ್ನು ಶಾಲಾ ಮಕ್ಕಳ ಸುರಕ್ಷತೆ ಪಿಕ್‌ಅಪ್ ಮತ್ತು ಡ್ರಾಪ್ ಉದ್ದೇಶಕ್ಕೆ ಪ್ರಾಯೋಗಿಕವಾಗಿ ನಿಯೋಜಿಸಲಾಗುವುದು.

## ವಿದ್ಯಾ ಜಾಲ

- NEP 2020 ಭಾರತದಲ್ಲಿ Ed tech ಉದ್ಯಮವನ್ನು ನಿಯಂತ್ರಿಸುವ, ತಂತ್ರಜ್ಞಾನದ ಅನುಷ್ಠಾನಕ್ಕೆ ಮಾನದಂಡಗಳನ್ನು ಹೊಂದಿಸುವ ಮತ್ತು ಗುಣಮಟ್ಟದ ಭರವಸೆಯನ್ನು ಖಾತ್ರಿಪಡಿಸುವ ನ್ಯಾಯಯುತ ವ್ಯಾಪಾರ ಆಯೋಗವನ್ನು ಸ್ಥಾಪಿಸಲು ಬೆಂಬಲಿಸುತ್ತದೆ. ಇದರ ಆಧಾರದಲ್ಲಿ Ed tech ಉದ್ಯಮಗಳ ಮೇಲೆ ಸಶಕ್ತ ನಿಯಂತ್ರಕ ವ್ಯವಸ್ಥೆಯನ್ನು ರೂಪಿಸಲಾಗುವುದು.

## ವಿಕಲಚೇತನ ಮಕ್ಕಳಿಗೆ ವಿಶೇಷ ಶಿಕ್ಷಣ

- ಭಾರತೀಯ ಸಂಕೇತ ಭಾಷೆ (ISL) ಅನ್ನು ಭಾರತದ 23ನೇ ಅಧಿಕೃತ ಭಾಷೆಯಾಗಿ ಗುರುತಿಸಲು ಪ್ರಯತ್ನಿಸಲಾಗುವುದು. ನಿಮ್ಹಾನ್ಸ್ ಅಂಗ ಸಂಸ್ಥೆಯೊಂದಿಗೆ ಮಕ್ಕಳ ಅಭಿವೃದ್ಧಿ ಸಂಶೋಧನಾ ಸಂಸ್ಥೆಗಾಗಿ ಸ್ಥಾಪಿಸಲಾಗುವುದು.
- ವಿಶೇಷ ಸಾಮರ್ಥ್ಯವುಳ್ಳ ಮಕ್ಕಳನ್ನು ಹೊಂದಿರುವ ಕುಟುಂಬಗಳಿಗೆ ಆರ್ಥಿಕ ನೆರವು. ಇದು ವೈದ್ಯಕೀಯ ಆರೈಕೆ, ಶಿಕ್ಷಣ ಮತ್ತು ಸಹಾಯಕ ಸಾಧನಗಳಿಗೆ ಸಬ್ಸಿಡಿಗಳನ್ನು ಒಳಗೊಂಡಿರುತ್ತದೆ. ಜೊತೆಗೆ ವಿಕಲಾಂಗರನ್ನು ನೇಮಿಸಿಕೊಳ್ಳುವ ಉದ್ಯೋಗದಾತರಿಗೆ ತೆರಿಗೆ ಪ್ರೋತ್ಸಾಹಗಳನ್ನು 'ಮಿಷನ್ ವಾತ್ಸಲ್ಯ' ಮುಖೇನ ಒದಗಿಸಲಾಗುವುದು.

# ಆರೋಗ್ಯವೇ ಸಂಪತ್ತು

ಮಾನವ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಆರೋಗ್ಯವೇ ಅಡಿಪಾಯ. ಈ ಸೂತ್ರದಡಿಯಲ್ಲಿ ಮುಂದಿನ ಐದು ವರ್ಷದೊಳಗೆ 6006 ಪಂಚಾಯಿತಿ ಕೇಂದ್ರಸ್ಥಾನದಲ್ಲಿ ಗ್ರಾಮ ಪಂಚಾಯಿತಿಗೆ ಒಂದರಂತೆ 30 ಹಾಸಿಗೆಗಳ ಸಾಮರ್ಥ್ಯವುಳ್ಳ ಹೈಟೆಕ್ ಆಸ್ಪತ್ರೆಗಳನ್ನು ಈ ಕೆಳಕಂಡ ಸೌಲಭ್ಯಗಳೊಂದಿಗೆ ನಿರ್ಮಿಸಲಾಗುವುದು.



- ಮಾದರಿ ಆಸ್ಪತ್ರೆ ಕಟ್ಟಡ
- ದಿನದ **24** ಗಂಟೆಯೂ ಕಾರ್ಯನಿರ್ವಹಣೆ
- ಐ.ಸಿ.ಯು. ಮತ್ತು ವಿಶೇಷ ವಾರ್ಡ್ ವ್ಯವಸ್ಥೆ
- ಟೆಲಿ ಓ.ಪಿ.ಡಿ.
- ಸಿ.ಟಿ. ಸ್ಕ್ಯಾನಿಂಗ್
- ದಂತ ಚಿಕಿತ್ಸಾ ವಿಭಾಗ
- ನೇತ್ರ ಚಿಕಿತ್ಸಾ ವಿಭಾಗ
- ರಕ್ತ ಪರೀಕ್ಷಾ ಮತ್ತು ಸಂಗ್ರಹಣಾಲಯ ಲ್ಯಾಬ್
- ನುರಿತ ವೈದ್ಯರ ನೇಮಕ
- ಇ.ಸಿ.ಜಿ. ಸೇವೆ
- ಉಚಿತ ಔಷಧಾಲಯ
- ಉಚಿತ ಆಂಬುಲೆನ್ಸ್ ಸೇವೆ
- ಪ್ರತಿ ವರ್ಷ **1200** ಸುಸಜ್ಜಿತ ಆಸ್ಪತ್ರೆಗಳನ್ನು ನಿರ್ಮಾಣ ಮಾಡಲು ಗುರಿ ಹೊಂದಲಾಗಿದೆ.
- ಜಿಲ್ಲಾ ಕೇಂದ್ರದಲ್ಲಿರುವ ಪ್ರತಿಯೊಂದು ಜಿಲ್ಲಾ ಆಸ್ಪತ್ರೆಯನ್ನು ಬೆಂಗಳೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಮಾದರಿಯಲ್ಲಿ ಉನ್ನತೀಕರಿಸಿವುದು ಮತ್ತು ಕೇಂದ್ರ-ರಾಜ್ಯ ಸರ್ಕಾರಗಳ ನೀತಿಯಂತೆ ಪ್ರತಿ ಜಿಲ್ಲೆಯಲ್ಲಿ ಒಂದು ವೈದ್ಯಕೀಯ ಕಾಲೇಜು ಖಾಸಗಿ ಸಹಭಾಗಿತ್ವದಲ್ಲಿ - ಪಿ.ಪಿ.ಪಿ. ಮಾದರಿಯಲ್ಲಿ ಸ್ಥಾಪಿಸಲಾಗುವುದು. ಅಲ್ಲದೆ, ಆಸ್ಪತ್ರೆಯಲ್ಲಿರುವ ರೋಗಿಗಳ ಚಿಕಿತ್ಸೆಗೆ ವೈದ್ಯಕೀಯ ಕಾಲೇಜಿನಲ್ಲಿ **MBBS** ಮತ್ತು **PG** ವ್ಯಾಸಂಗ ಮಾಡುತ್ತಿರುವ ವೈದ್ಯಕೀಯ ವಿದ್ಯಾರ್ಥಿಗಳ ಮತ್ತು ನರ್ಸಿಂಗ್ ಕೋರ್ಸ್ ಗಳ ವ್ಯಾಸಂಗ ಮಾಡುತ್ತಿರುವ ನರ್ಸಿಂಗ್ ವಿದ್ಯಾರ್ಥಿಗಳ ಸೇವೆಯನ್ನು ಪಡೆದು ರೋಗಿಗಳಿಗೆ ಉತ್ತಮ ಆರೈಕೆ ನೀಡಲಾಗುವುದು.
- ದುಬಾರಿ ವೆಚ್ಚದ ವೈದ್ಯಕೀಯ ಶಸ್ತ್ರಚಿಕಿತ್ಸೆಗಳಾದ ಮೂಳೆಮಜ್ಜೆ ಚಿಕಿತ್ಸೆ **(Bone Marrow Treatment)** ಹೃದಯ, ಶ್ವಾಸಕೋಶ, ಯಕೃತ್ ಬದಲಾಯಿಸುವ ಶಸ್ತ್ರ ಚಿಕಿತ್ಸೆಗಳಿಗೆ **(Heart, Lungs, Liver transplantation)** ಮುಖ್ಯಮಂತ್ರಿ ಪರಿಹಾರ ನಿಧಿಯಿಂದ **25** ಲಕ್ಷ ರೂ.ವರೆಗಿನ ಪರಿಹಾರವನ್ನು **24** ಗಂಟೆಗಳಲ್ಲಿಯೇ ನೀಡಲಾಗುವುದು.
- ಆಯುಷ್ಮಾನ್ ಭಾರತ್, ಯಶಸ್ವಿನಿ ಯೋಜನೆಯಡಿಯಲ್ಲಿ ಸೇರ್ಪಡೆಯಾಗದ ಖಾಯಿಲೆಗಳಿಗೂ ಪರಿಹಾರ ನೀಡಲಾಗುವುದು.
- ರಾಜ್ಯದಲ್ಲಿ ನಿಮ್ಹಾನ್ಸ್ ಮಾದರಿಯಲ್ಲಿ **500** ಹಾಸಿಗೆಯುಳ್ಳ ಆಧುನಿಕ ನರ ವಿಜ್ಞಾನ ವೈದ್ಯಕೀಯ ಸಂಸ್ಥೆ ಸ್ಥಾಪನೆ ಮಾಡಲಾಗುವುದು.

# ರೈತ ಚೈತನ್ಯ

ಭಾರತವು ಇಂದಿಗೂ ಕೃಷಿ ಪ್ರಧಾನ ದೇಶ, ರೈತರೇ ನಮ್ಮೆಲ್ಲರ ಅನ್ನದಾತರು. ನಮ್ಮ ರೈತರ ಅಭಿವೃದ್ಧಿಗಾಗಿ ಕೆಳಗಿನ ಸೌಲಭ್ಯಗಳನ್ನು ಒದಗಿಸುತ್ತದೆ.



- ಕೃಷಿ ಪಂಪ್‌ಸೆಟ್‌ಗೆ **24/7** ಉಚಿತವಾಗಿ ಗುಣಮಟ್ಟದ ವಿದ್ಯುತ್ ಸೌಲಭ್ಯ ಮತ್ತು ಸೋಲಾರ್ ಪಂಪ್‌ಗಳ ಅಳವಡಿಕೆ
- ತಂತ್ರಜ್ಞಾನ ಆಧಾರಿತ ವ್ಯವಸಾಯ
- ಯಾಂತ್ರೀಕೃತ ಹೈನುಗಾರಿಕೆ
- ಕೋಳಿ, ಕುರಿ ಸಾಕಾಣಿಕೆಗೆ ಆದ್ಯತೆ
- ಬೆಳೆಗಳ ಆಧಾರದಲ್ಲಿ ಪೂರಕ ಕೈಗಾರಿಕೆಗಳ ಸ್ಥಾಪನೆ
- ಹವಾಮಾನ ವರದಿ ಪರಿಕರಗಳ ಅಳವಡಿಕೆ
- ತೋಟಗಾರಿಕೆ ಅಭಿವೃದ್ಧಿ
- ಉತ್ತಮ ಗುಣಮಟ್ಟದ ಬಿತ್ತನೆ ಬೀಜಗಳ ಪೂರೈಕೆ
- ಭೂ ಸುಧಾರಣಾ ಕ್ರಮಗಳ ಅನುಷ್ಠಾನ
- ನವೀನ ಪದ್ಧತಿಯ ನೀರಾವರಿ
- ಪಂಚಾಯಿತಿಗೊಂದು ಕೃಷಿ ಮಾರುಕಟ್ಟೆ
- ಬೆಳೆಗಳ ಸ್ಥಿರತೆ ರಕ್ಷಣೆ
- ಪ್ರತಿ ತಾಲ್ಲೂಕಿನಲ್ಲಿ **100** ಟನ್ ಸಾಮರ್ಥ್ಯದ ಶೀತಲೀಕರಣ ಗೋಡೌನ್ ನಿರ್ಮಾಣ
- ಈಗಾಗಲೆ ರಾಜ್ಯದ **54** ತಾಲ್ಲೂಕುಗಳಲ್ಲಿ ಶೀತಲೀಕರಣ ಗೋಡೌನ್‌ಗಳನ್ನು ನಬಾರ್ಡ್ ಯೋಜನೆಯಡಿ ನಿರ್ಮಿಸಲಾಗಿದೆ. ಇನ್ನುಳಿದ **172** ತಾಲ್ಲೂಕುಗಳ ಪ್ರತಿ ಗ್ರಾಮಪಂಚಾಯಿತಿ ಕೇಂದ್ರದಲ್ಲಿ ಕೃಷಿ ಯಂತ್ರಧಾರೆ ಕೇಂದ್ರ ಸ್ಥಾಪನೆ
- ರೈತರು, ಮುಂಗಾರು - ಹಿಂಗಾರುಗಳಲ್ಲಿ ಕೃಷಿಗೆ ಅಗತ್ಯವಿರುವ ಯಂತ್ರೋಪಕರಣಗಳನ್ನು ಭೂ ಹಿಡುವಳಿ ಮತ್ತು ರೈತರು ಆರ್ಥಿಕವಾಗಿ ಹಿಂದುಳಿಕೆಯ ಆಧಾರದ ಮೇಲೆ ಟ್ರಾಕ್ಟರ್, ಟಿಲ್ಲರ್, ಕಟರ್ ಮುಂತಾದವುಗಳನ್ನು ಕೃಷಿ ಯಂತ್ರಧಾರೆ ಕೇಂದ್ರದಿಂದ ರಿಯಾಯಿತಿ ಬಾಡಿಗೆ ದರದಲ್ಲಿ ಪಡೆಯಬಹುದು. ಈ ಕೃಷಿ ಯಂತ್ರಧಾರೆ ಕೇಂದ್ರಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆಯನ್ನು ಗ್ರಾಮದಲ್ಲಿರುವ ನಿರುದ್ಯೋಗಿ ಕೃಷಿ ಹಾಗೂ ಇತರೆ ಪದವೀಧರ ಅಥವಾ ರಾಜ್ಯ ಸರಕಾರ ಬೆಂಬಲ ನೀಡುವ ಸೇವಾಸಂಸ್ಥೆಗಳು ಮತ್ತು ಸಹಾಯಧನದೊಂದಿಗೆ ನಿರ್ವಹಿಸುತ್ತಾರೆ.
- ರಾಜ್ಯದ ರೈತರು ಸಾಲದ ಸುಳಿಯಲ್ಲಿ ಸಿಕ್ಕು ಆತ್ಮ ಹತ್ಯೆಗೆ ಶರಣಾಗಿದ್ದಾರೆ. ನಮ್ಮ ಸರ್ಕಾರ ಆಡಳಿತದಲ್ಲಿದ್ದಾಗ ಸಹಕಾರ ಮತ್ತು ವಾಣಿಜ್ಯ ಬ್ಯಾಂಕ್ ಗಳಲ್ಲಿದ್ದ ರೈತರ ಸಾಲ ಮನ್ನಾ ಎರಡು ಬಾರಿ ಮಾಡಿದೆ. ಆದರೆ, ಸಾಲ ಮನ್ನಾ ಕೇವಲ ಒಂದು ಪರಿಹಾರ ಮಾತ್ರ, ರೈತರ ಜ್ವಲಂತ ಸಮಸ್ಯೆಗಳಿಗೆ ರೈತ ಚೈತನ್ಯದಲ್ಲಿ ಈ ಕೆಳಕಂಡ ಪರಿಹಾರಗಳಿವೆ.



## ರೇಷ್ಮೆ ವಲಯ

- ರೇಷ್ಮೆ ವಲಯದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಮತ್ತು ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ರೇಷ್ಮೆಯನ್ನು ರೈತರು ಜೀವನೋಪಾಯವನ್ನಾಗಿ ಮಾಡಿಕೊಂಡಿರುತ್ತಾರೆ.
- ಆದರೆ ರೇಷ್ಮೆ ಬೆಳೆಗಾರರು ಉತ್ತಮ ತಳಿಯ ಮೊಟ್ಟೆಗಳ ಕೊರತೆ, ರೇಷ್ಮೆ ಹುಳುಗಳಿಗೆ ನೀಡಲಾಗುವ ಹಿಪ್ಪುನೇರಳೆ ಸೊಪ್ಪಿಗೆ ಕ್ರಿಮಿಕೀಟಗಳ ಕಾಟ, ರೇಷ್ಮೆ ಹುಳುಗಳಿಗೆ ತಗಲುವ ಸೋಂಕು, ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೇಷ್ಮೆ ಬೆಳೆಗಾರನಿಗೆ ಆಗುವ ಅನ್ಯಾಯಗಳನ್ನು ಹೋಗಲಾಡಿಸಿ ರೇಷ್ಮೆ ಬೆಳೆ ಮತ್ತು ಅದರ ಪೂರಕ ವ್ಯವಸ್ಥೆಗಳನ್ನು ಉದ್ಯಮವಾಗಿ ಪರಿಗಣಿಸಿ ವಿವಿಧ ಪ್ರೋತ್ಸಾಹಗಳನ್ನು ನೀಡಲಾಗುವುದು.
- ರೇಷ್ಮೆ ಇಲಾಖೆಯಲ್ಲಿ ಖಾಲಿ ಇರುವ ವಿವಿಧ ವೃಂದದ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.
- ರಾಜ್ಯದಲ್ಲಿರುವ ರೇಷ್ಮೆ ಮಾರುಕಟ್ಟೆಗಳನ್ನು ಆಧುನೀಕರಣಗೊಳಿಸಲಾಗುವುದು.
- ರೇಷ್ಮೆ ಕೃಷಿಕರು ಮಾರುಕಟ್ಟೆಯಲ್ಲಿ ತಂಗಲು ಸುವ್ಯವಸ್ಥಿತ ಕೊಠಡಿಗಳನ್ನು ನಿರ್ಮಿಸಲಾಗುವುದು.





# ವಸತಿ ಆಸರೆ

**ಸುರಕ್ಷಿತ ವಾಸಕ್ಕೆ "ಸರ್ವರಿಗೂ ಸ್ವಂತ ಸೂರು" ಎಂಬ ಸೂತ್ರದಡಿಯಲ್ಲಿ ವಸತಿ ರಹಿತರಿಗೆ ಮನೆ ನಿರ್ಮಿಸುವುದು ನಮ್ಮ ಗುರಿಯಾಗಿದೆ. ಈ ಯೋಜನೆ ಅಡಿಯಲ್ಲಿ ಬರುವ ಸೌಲಭ್ಯಗಳೆಂದರೆ**



- ಸುಂದರ ಮತ್ತು ಸದೃಢ ಮನೆ.
- ನೆರೆ ಸಂತ್ರಸ್ತರಿಗೆ ನವಗ್ರಾಮ ನಿರ್ಮಾಣ.
- ಉದ್ಯಾನವನ ನಿರ್ಮಾಣ.
- ಹೊರಾಂಗಣ ವ್ಯಾಯಾಮ ಶಾಲೆ.
- ಆಟದ ಮೈದಾನ.
- ಪರಿಸರ ಸ್ನೇಹಿ ಜೀವನಕ್ಕೆ ವ್ಯವಸ್ಥೆ.
- ಸೋಲಾರ್ ವಿದ್ಯುತ್ ಅಳವಡಿಕೆ.
- ತ್ಯಾಜ್ಯ ವಿಲೇವಾರಿ ಘಟಕ.
- ಸಮುದಾಯ ಭವನ.
- ಭದ್ರತೆಗಾಗಿ ಸಿಸಿ ಟಿವಿ ಅಳವಡಿಕೆ.

- ಗ್ರಾಮಾಂತರ ಮತ್ತು ಪಟ್ಟಣಗಳಲ್ಲಿರುವ ವಸತಿ ಮತ್ತು ನಿವೇಶನ ರಹಿತರಿಗೆ ರಾಜ್ಯ ಸರ್ಕಾರದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ಮತ್ತು ಕರ್ನಾಟಕ ಗೃಹ ನಿರ್ಮಾಣ ಮಂಡಳಿ ಮುಖೇನ ಮತ್ತು ಕೇಂದ್ರ ಸರ್ಕಾರಗಳ ಯೋಜನೆ ಅಡಿ ಸ್ವಂತ ಸೂರು ಒದಗಿಸಲಾಗುವುದು.
- ರಾಜ್ಯದಲ್ಲಿ **2019** ಮತ್ತು **2020** ರಲ್ಲಿ ಭಾರಿ ಮಳೆ, ನೆರೆಯಿಂದ ಹಲವಾರು ಜಿಲ್ಲೆಗಳಲ್ಲಿ ಹಾನಿಗೊಳಗಾದ ಮನೆಗಳ ಪುನರ್ ನಿರ್ಮಾಣ, ದುರಸ್ತಿ ಕಾರ್ಯ ಇನ್ನೂ ಆರಂಭವೇ ಆಗಿಲ್ಲ.
- ಅಲ್ಲದೆ, ಭಾಗಶ: ಹಾನಿಗೊಳಗಾದ ಮನೆಗಳ ನೊಂದ ಸಂತ್ರಸ್ತರಿಗೆ ಇನ್ನೂ ಪರಿಹಾರ ವಿತರಿಸಿಲ್ಲ.
- ಪದೇ ಪದೇ ನೆರೆ ಹಾವಳಿಗೆ ತುತ್ತಾದ ಗ್ರಾಮಗಳ ಸ್ಥಳಾಂತರ ಮತ್ತು ಸಂತ್ರಸ್ತರಿಗೆ ಪುನರ್ ವಸತಿ ಕೈಗೊಂಡಿಲ್ಲ. ಇವೆಲ್ಲವುಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು.
- ವಿವಿಧ ವಸತಿ ಯೋಜನೆ ಅಡಿ ಫಲಾನುಭವಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೀಡುವ ಸಹಾಯಧನ **1.20** ಲಕ್ಷ ರೂ.ನಿಂದ **2.00** ಲಕ್ಷದವರೆಗೆ ಇದ್ದು, ಈ ಸಹಾಯಧನವನ್ನು **5** ಲಕ್ಷ ರೂ.ಗಳಿಗೆ ಹೆಚ್ಚಿಸಲಾಗುವುದು.

2018ರಲ್ಲಿ ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ನಡೆಸಿರುವ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ **39,94,316** ವಸತಿ ಮತ್ತು ನಿವೇಶನ ರಹಿತರು ಇರುತ್ತಾರೆ. ವಿವರ ಈ ಕೆಳಕಂಡಂತೆ ಇದೆ

| ಪ್ರದೇಶ | ವಸತಿ ರಹಿತರು | ನಿವೇಶನ ರಹಿತರು | ಒಟ್ಟು |
|---|---|---|---|
| ಗ್ರಾಮೀಣ | 18,72,030 | 7,15,016 | 25,87,046 |
| ಪಟ್ಟಣ | 10,61,392 | 3,45,703 | 14,07,265 |
| ಒಟ್ಟು | 29,33,422 | 10,60,719 | 39,94,311 |

# ಯುವನವ ಮಾರ್ಗ ಮತ್ತು ಮಹಿಳಾ ಸಬಲೀಕರಣ



ಯುವ ಜನಾಂಗ ಈ ದೇಶದ ಅಭಿವೃದ್ಧಿಗೆ ಬಹು ದೊಡ್ಡ ಶಕ್ತಿ ಅಂತೆಯೇ ಮಹಿಳೆಯರು ಈ ನೆಲದ ಸಂಸ್ಕೃತಿಯ ಸಂರಕ್ಷಕರು. ಇವರ ಅಭಿವೃದ್ಧಿಗಾಗಿ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸುತ್ತೇವೆ.

- ಕೌಶಲ್ಯ ಅಭಿವೃದ್ಧಿ, ತಂತ್ರಜ್ಞಾನ ಆಧಾರಿತ ಉಚಿತ ತರಬೇತಿ
- ಉದ್ಯೋಗ ಮತ್ತು ಸಂದರ್ಶನ ಕೇಂದ್ರಗಳ ಸ್ಥಾಪನೆ, ಉದ್ಯಮಶೀಲತೆ ಆಧಾರಿತ ತರಬೇತಿ
- ಪ್ರತಿ ಗ್ರಾಮಕ್ಕೂ ಕೌಶಲ್ಯ ತರಬೇತಿ ವಾಹನ
- ಮಹಿಳೆಯರಿಗೆ ಗೃಹ ಬಳಕೆ ವಸ್ತು ತಯಾರಿಕೆ ತರಬೇತಿ
- ಸುಲಭ ಮತ್ತು ಬಡ್ಡಿ ರಿಯಾಯಿತಿ ಸಾಲ ಸೌಲಭ್ಯ
- ಗ್ರಾಮ ಪಂಚಾಯಿತಿಗೆ ಕಂಪ್ಯೂಟರ್ ಕೇಂದ್ರ
- ಯುವ ಜನರಿಗೆ ವ್ಯಕ್ತಿ ವಿಕಸನ ಮತ್ತು ಇಂಗ್ಲೀಷ್ ತರಬೇತಿ
- ಯುವಜನತೆಗೆ ಉದ್ಯೋಗ ಸೃಷ್ಟಿ ಯೋಜನೆಗಳು
- ಉದ್ಯಮ ಸ್ಥಾಪನೆಗೆ ಸಹಾಯ ಧನ
- ಒಂದು ವರ್ಷದ ಕೌಶಲ್ಯತೆ ಅಭಿವೃದ್ಧಿ ತರಬೇತಿ ಯೊಜನೆಯಲ್ಲಿ ತೊಡಿಸಿಕೊಳ್ಳುವ ಯುವಕ ಯುವತಿಯರಿಗೆ ಮಾಸಿಕ 8 ಸಾವಿರ ರೂ.ಗಳ ಭತ್ಯೆ
- ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಸ್ಥಾಪನೆಗೆ ಮುಂದಾಗುವ ನಿರುದ್ಯೋಗ ಯುವಕರಿಗೆ ಕೈಗಾರಿಕೆ ಉತ್ಪನ್ನ ಘಟಕ ಸ್ಥಾಪನೆಗೆ ರೂ. 10 ಲಕ್ಷಗಳ ಸಹಾಯಧನ
- ತರಬೇತಿ ಮತ್ತು ಸೇವೆಗಳನ್ನು ಒದಗಿಸುವ ವಲಯಗಳಲ್ಲಿ ತೊಡಗಿಸಿಕೊಳ್ಳುವ ನಿರುದ್ಯೋಗಿ ಯುವಕರಿಗೆ ರೂ.3 ಲಕ್ಷ ರೂ.ಗಳ ಸಹಾಯಧನ
- ಸಣ್ಣ ಉದ್ಯಮವಾಗಿ ವ್ಯಾಪಾರ-ವಹಿವಾಟು ನಡೆಸುವ ನಿರುದ್ಯೋಗಿ ಯುವಕರಿಗೆ ರೂ.2 ಲಕ್ಷಗಳ ಸಹಾಯಧನ
- ಚೀನಾ ದೇಶದೊಂದಿಗೆ ಸ್ಪರ್ಧೆ ಯೋಜನೆಯಡಿ ಜಿಲ್ಲಾ ಮಟ್ಟದಲ್ಲೂ ಕೈಗಾರಿಕಾ ಕ್ಲಸ್ಟರ್‌ಗಳ ಸ್ಥಾಪನೆ
- ಸೂಕ್ಷ್ಮ ಸಣ್ಣ ಮತ್ತು ಮಧ್ಯಮ ಉಧ್ಯಮಗಳನ್ನು ನಡೆಸುವ ಮಹಿಳಾ ಉಧ್ಯಮಗಳಿಗೆ ರಿಯಾಯಿತಿ ಬಡ್ಡಿ ದರದಲ್ಲಿ ಮೇಲಾಧಾರ ಭದ್ರತೆ (collateral free) ಇಲ್ಲದೆ ಎರಡು ಕೋಟಿ ರೂ.ಗಳ ವರೆಗೆ ಬ್ಯಾಂಕ್ ಗಳ ಮುಖೇನ ಸಾಲ
- ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಸಿದ್ದ ಉಡುಪು ತಯಾರಿಸುವ ಘಟಕಗಳ (garment manufacture units) ಅಂದಾಜು ವೆಚ್ಚದ ಶೇ.50 ರಷ್ಟನ್ನು ಸಹಾಯಧನವಾಗಿ ನೀಡುವುದು

# ಕೈಗಾರಿಕಾಭಿವೃದ್ಧಿ

## ಮಹತ್ವಾಕಾಂಕ್ಷೆ ಜಿಲ್ಲೆಗಳ ಕೃಷಿ ಮತ್ತು ಉದ್ಯಮ ಆಧಾರಿತ ಕ್ಲಸ್ಟರ್‌ಗಳ ಸ್ಥಾಪನೆ



- ಸಕ್ಕರೆ ನಾಡು ಮಂಡ್ಯದ ಮೈಶುಗರ್ ಕಾರ್ಖಾನೆ ಸ್ಥಳದಲ್ಲಿ **1000** ಕೋಟಿ ರೂ. ಅಂದಾಜು ಮೊತ್ತದಲ್ಲಿ ಹೊಸ ಮೈಶುಗರ್ ಕಾರ್ಖಾನೆ ಸ್ಥಾಪನೆ.
- ಕಿತ್ತೂರು ಕರ್ನಾಟಕದ ಬೆಳಗಾವಿ ಜಿಲ್ಲೆಯ ಆಥಣಿಯಲ್ಲಿ ಚರ್ಮೋದ್ಯಮದ ಒಂದು ಕ್ಲಸ್ಟರ್ ನ್ನು **1000** ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಸ್ಥಾಪನೆ ಮಾಡಲಾಗುವುದು.
- ಚಿನ್ನದ ಗಣಿನಾಡು ಕೋಲಾರ ಜಿಲ್ಲೆ ತರಕಾರಿ - ಹಣ್ಣು ಹಂಪಲು ತವರೂರು. ಜಿಲ್ಲೆಯಲ್ಲಿ ಅತಿ ಹೆಚ್ಚಾಗಿ ಬೆಳೆಯುವ ಟೊಮೊಟೊ ಬೆಳೆ ಸಂಸ್ಕರಣೆಗೆ **1000** ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಕ್ಲಸ್ಟರ್ ಸ್ಥಾಪನೆ ಮಾಡಲಾಗುವುದು.
- ರೇಷ್ಮೆ ನಾಡುಗಳಾದ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ **1000** ಕೋಟಿ ರೂ ಅಂದಾಜು ಮೊತ್ತದಲ್ಲಿ ರೇಷ್ಮೆ ಕ್ಲಸ್ಟರ್ ಗಳ ಸ್ಥಾಪನೆ ಮಾಡಲಾಗುವುದು.
- ಇನ್ನುಳಿದ **15** ಜಿಲ್ಲೆಗಳಲ್ಲಿನ ಕೃಷಿ ಬೆಳೆ ಮತ್ತು ಉದ್ಯಮ ಆಧರಿತ ಉದ್ಯಮಗಳನ್ನು **5000** ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಮುಂದಿನ ವರ್ಷಗಳಲ್ಲಿ ಸ್ಥಾಪಿಸಲಾಗುವುದು.
- **2003** ರ ನಗರಸಭೆ ಕಾಯಿದೆ ಅನ್ವಯ ರಾಜ್ಯದಲ್ಲಿರುವ ಪ್ರಮುಖ ಕೈಗಾರಿಕೆ ಅಭಿವೃದ್ಧಿ ಕೇಂದ್ರಗಳಲ್ಲಿ ಕೈಗಾರಿಕಾ ಪಟ್ಟಣ ಪ್ರಾಧಿಕಾರ ರಚನೆ ಮಾಡಲಾಗುವುದು.
- ರಾಜ್ಯದಲ್ಲಿರುವ ಎಲ್ಲಾ ಕೈಗಾರಿಕಾ ಪ್ರದೇಶಗಳಲ್ಲಿ ಟ್ರಕ್ ಟರ್ಮಿನಲ್ ಅಭಿವೃದ್ಧಿ ಮತ್ತು ಕೈಗಾರಿಕಾ ತ್ಯಾಜ್ಯ ವಿಂಗಡಣೆ, ವಿಲೇವಾರಿ ಕೇಂದ್ರ ಸ್ಥಾಪನೆಗೆ ಅಗತ್ಯವಿರುವ ಜಮೀನನ್ನು ಮೀಸಲು ಇಡಲಾಗುವುದು.
- ರಾಜ್ಯ ಮಟ್ಟದ ಮತ್ತು ಜಿಲ್ಲಾ ಮಟ್ಟದ ಉದ್ಯಮ, ಕೈಗಾರಿಕಾ ಯೋಜನೆ ಅನುಮೋದನೆ ಉಪಸಮಿತಿ ಮತ್ತು ಏಕ ಗವಾಕ್ಷಿ ಸಮಿತಿಗಳಲ್ಲಿ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕೆಗಳ ಸಂಘ ಸಂಸ್ಥೆಗಳ ಪ್ರತಿನಿಧಿಗಳಿಗೆ ಪ್ರಾತಿನಿಧ್ಯ ಒದಗಿಸಲಾಗುವುದು.
- ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಲಿಮಿಟೆಡ್ ನ್ನು ಪುನಶ್ಚೇತನಗೊಳಿಸುವ ಯೋಜನೆಯಲ್ಲಿ ಎರಡು ಜಿಲ್ಲೆಗಳಲ್ಲಿ ವಿಸ್ತರಣಾ ಘಟಕಗಳನ್ನು ಸ್ಥಾಪಿಸುವುದು ಮತ್ತು ದೇಶ ವಿದೇಶಗಳಲ್ಲಿ ಮೈಸೂರು ಸೋಪ್ಸ್ ಅಂಡ್ ಡಿಟರ್ಜೆಂಟ್ ಉತ್ಪನ್ನಗಳಿಗೆ ಮಾರುಕಟ್ಟೆಯನ್ನು ವಿಸ್ತರಿಸಲು ಯೋಜನೆಗಳನ್ನು ರೂಪಿಸಲಾಗುವುದು.
- ವಿಮಾನಯಾನ ಉದ್ಯಮಕ್ಕೆ ಏರ್ ಬಸ್ – **320** ಒಳಗೊಂಡಂತೆ ಪೂರಕವಾದ ದುರಸ್ತಿ ಮತ್ತು ನಿರ್ವಹಣೆ ಘಟಕಗಳನ್ನು ಹಾಸನದಲ್ಲಿ ಸ್ಥಾಪಿಸಲಾಗುವುದು



## ತಾಲ್ಲೂಕು ಮಟ್ಟದಲ್ಲಿ ಕೈಗಾರಿಕೆ ವಸಹಾತುಗಳ ಸ್ಥಾಪನೆ

- 2000 ಚದರ ಅಡಿ ವಿಸ್ತೀರ್ಣವುಳ್ಳ ಮತ್ತು ಎಲ್ಲಾ ಮೂಲ ಸೌಕರ್ಯಗಳನ್ನು ಒಳಗೊಂಡ ಕೈಗಾರಿಕೆ ಶೆಡ್‌ಗಳನ್ನು ನಿರ್ಮಿಸಲಾಗುವುದು. ಅವುಗಳನ್ನು ಅಡಿಕೆ ಪಟ್ಟಿ ತಟ್ಟೆ ತಯಾರಿಕೆ, ಮನೆಯಲ್ಲಿ ತಯಾರಿಸಿದ ತಿಂಡಿ ತಿನಿಸುಗಳು, ಸಿರಿ-ಧಾನ್ಯಗಳು, ಪೊಟ್ಟಣ ಕಟ್ಟುವ ಉಪ್ಪಿನಕಾಯಿ ತಯಾರಿಕೆ ಮುಂತಾದ ಸಣ್ಣ ಉದ್ಯಮಗಳ ಘಟಕಗಳನ್ನು ಸ್ಥಾಪಿಸಲು ಅತೀ ಕಡಿಮೆ ಬಾಡಿಗೆ ದರದಲ್ಲಿ ಆಸಕ್ತ ಉದ್ಯಮಿಗಳಿಗೆ ನೀಡಲಾಗುವುದು.
- ಈ ಉದ್ಯಮಿಗಳು **25** ರಿಂದ **40** ವರ್ಷದೊಳಗೆ ಇರಬೇಕು.
- ಮಹಿಳಾ ಉದ್ಯಮಿಗಳಿಗೆ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದ ಉದ್ಯಮಿಗಳಿಗೆ ಮೇಲಿನ ಕೈಗಾರಿಕಾ ಶೆಡ್‌ಗಳನ್ನು ಅತೀ ಕಡಿಮೆ ದರದಲ್ಲಿ ನೀಡಿ ಉತ್ತೇಜಿಸಲಾಗುವುದು.
- ಪ್ರತಿ ವರ್ಷ ಪ್ರತಿ ತಾಲ್ಲೂಕಿನಲ್ಲಿ ಕನಿಷ್ಠ **100** ಉದ್ಯಮಿಗಳನ್ನು ಪ್ರೋತ್ಸಾಹಿಸಿ ಬೆಳೆಸುವ ಆಶಯ ಹೊಂದಲಾಗಿದೆ.
- ಇದರೊಂದಿಗೆ ತಾಲ್ಲೂಕು ಮಟ್ಟದಲ್ಲಿ ಚೈನಾದಲ್ಲಿ ನಿರ್ಮಿಸಿರುವಂತೆ ಪೂರಕ ಕೈಗಾರಿಕಾ ಘಟಕಗಳನ್ನು Ancillary Industrial Unit) ಸ್ಥಾಪನೆ ಮಾಡಲಾಗುವುದು.
- ಈ ಘಟಕಗಳಲ್ಲಿ ಸಿದ್ಧ ಉಡುಪು ತಯಾರಿಕೆ, ಬೊಂಬೆ ತಯಾರಿಕೆ, ಬೆಳಕಿನ ವಸ್ತುಗಳ ತಯಾರಿಕೆ, ವೈದ್ಯಕೀಯ ಉಪಕರಣಗಳ ಜೋಡಣೆ, ವಿದ್ಯುತ್ ವಾಹನಗಳ ಬಿಡಿ ಭಾಗಗಳ ಘಟಕಗಳನ್ನು ಸ್ಥಾಪಿಸಿ ಯುವಕರು ಸ್ವಂತ ಉದ್ಯಮಿಗಳಾಗಲು ಪ್ರೋತ್ಸಾಹಿಸಲಾಗುವುದು.

# ಸಾರಿಗೆ ಮತ್ತು ಪ್ರವಾಸೋದ್ಯಮ



**ಕರ್ನಾಟಕ ಶಿಲ್ಪಿಗಳ ಮತ್ತು ಕಲ್ಪತರು ನಾಡು, ಪ್ರವಾಸಿಗರ ಬೀಡು**

- ರಾಜ್ಯದಾದ್ಯಂತ ಇರುವ ಮತ್ತು ಗತ ವೈಭವ ಸಾರುವ ದೇವಾಲಯ, ಮಸೀದಿ ಮತ್ತು ಚರ್ಚ್‌ಗಳು, ಪಶ್ಚಿಮ ಘಟ್ಟದ ಮನಮೋಹಕ ಪ್ರವಾಸಿ ತಾಣಗಳು, ಜಲಪಾತಗಳು, ವೈವಿಧ್ಯಮಯ ಅರಣ್ಯ, ಕಡಲತೀರದ ಪ್ರೇಕ್ಷಣೀಯ ಸ್ಥಳಗಳನ್ನು ಹೊಂದಿರುವ ಸುಂದರ ಮತ್ತು ಆಯಕಟ್ಟು ಸ್ಥಳಗಳಲ್ಲಿ ಪ್ರವಾಸಿಗರ ಸಕಲ ಸೌಕರ್ಯಕ್ಕೆ ಹೋಟೆಲ್‌ಗಳು, ಮಾಲ್‌ಗಳು ಮತ್ತು ಮೂಲಭೂತ ಸೌಕರ್ಯಗಳನ್ನು ಮೂಲ ಪರಿಸರಕ್ಕೆ ಧಕ್ಕೆಯಾಗದಂತೆ ಒದಗಿಸಲು ಒಂದು ನೀಲಿ ನಕ್ಷೆ ತಯಾರಿಸಲಾಗುವುದು. ಈ ಪ್ರವಾಸಿ ತಾಣಗಳಲ್ಲಿ ಹೋಟೆಲ್, ಮಾಲ್‌ಗಳ ನಿರ್ಮಾಣ ಮತ್ತು ಇತರ ಸೇವೆಗಳ ನಿರ್ವಹಣೆಯನ್ನು ಸ್ಥಳೀಯರಿಗೆ ನೀಡಿ ಉದ್ಯೋಗ ಸೃಷ್ಟಿಸಲು ಅವಕಾಶ ಮಾಡಿಕೊಡಲಾಗುವುದು.
- ಅರಮನೆ ನಗರಿ ಮೈಸೂರು ನಗರದ ಸರಹದ್ದಿನಲ್ಲಿ ಮನರಂಜನೆ ಪಾರ್ಕ್ (Ammusement Park) ನ್ನು ಡಿಸ್ನಿ ವರ್ಲ್ಡ್ ಸಹಯೋಗದೊಂದಿಗೆ ಸ್ಥಾಪಿಸಲಾಗುವುದು.
- ದಕ್ಷಿಣ ಭಾರತದಲ್ಲಿ ಸಂಚರಿಸುವ ಪ್ರವಾಸಿ ವಾಹನಗಳಿಗೆ ಇತರ ದಕ್ಷಿಣದ ರಾಜ್ಯಗಳಂತೆ ನಮ್ಮ ರಾಜ್ಯವನ್ನು ದ್ವಿಪಕ್ಷೀಯ ಅಂತಾರಾಜ್ಯ ರಹದಾರಿ ಸಾರಿಗೆ ಒಪ್ಪಂದದಲ್ಲಿ ಸೇರಿಸಲಾಗುವುದು.
- ಅಂತರ ರಾಜ್ಯ ಚೆಕ್ ಪೋಸ್ಟ್‌ಗಳನ್ನು ಡಿಜಿಟಲ್ ಚೆಕ್‌ಪೋಸ್ಟ್‌ಗಳಾಗಿ ಪರಿವರ್ತಿಸಲಾಗುವುದು.
- ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರಯಾಣಿಕರಿಗೆ ಮತ್ತು ಚಾಲಕರಿಗೆ ಪ್ರತಿ 100 ಕಿ.ಮೀ. ದೂರದಲ್ಲಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಪೆಟ್ರೋಲ್ ಪಂಪ್, ಹೋಟೆಲ್, ಎಲೆಕ್ಟ್ರಿಕ್ ರೀಚಾರ್ಜ್, ವೈದ್ಯಕೀಯ, ಆಂಬ್ಯುಲೆನ್ಸ್ ಎಟಿಎಂ, ಗ್ರಾಹಕ ಅಗತ್ಯ ವಸ್ತುಗಳ ಸೌಲಭ್ಯ, ಅಂತಾರಾಷ್ಟ್ರೀಯ ಗುಣಮಟ್ಟದ ಶೌಚಾಲಯ, ವಸತಿ ನಿಲಯ, ಕರಕುಶಲ ಅಂಗಡಿಗಳನ್ನು ಕಲ್ಪಿಸಲಾಗುವುದು.
- ಹೊಸದಾಗಿ ಪ್ರವಾಸಿ ವಾಹನಗಳನ್ನು ಕರ್ನಾಟಕ ರಾಜ್ಯದಲ್ಲಿ ನೋಂದಣಿ ಮಾಡುವ ಸಂದರ್ಭದಲ್ಲಿ ಹೊರ ರಾಜ್ಯಗಳಂತೆ ಜೀವಿತಾವಧಿಯ ತೆರಿಗೆಯಿಂದ ವಾರ್ಷಿಕ ತೆರಿಗೆಗೆ ಬದಲಾವಣೆ ಮಾಡಲಾಗುವುದು.



# ಜಲಧಾರೆ

ರಾಜ್ಯದ ಪ್ರತಿಷ್ಠಿತ ಬೃಹತ್ ನೀರಾವರಿ ಹಾಗೂ ಕುಡಿಯುವ ನೀರಿನ ಯೋಜನೆಗಳನ್ನು ಸಮಾರೋಪಾದಿಯಲ್ಲಿ ಅನುಷ್ಠಾನಗೊಳಿಸುವುದು.

## ಕೃಷ್ಣಾ ಮೇಲ್ದಂಡೆ ಯೋಜನೆ

- ಕೃಷ್ಣಾ ಜಲವಿವಾದ ನ್ಯಾಯಮಂಡಳಿಯಿಂದ ಕೃಷ್ಣಾ ಮೇಲ್ದಂಡೆ ಯೋಜನೆಗೆ **303 TMC** ಹಂಚಿಕೆಯಾಗಿದೆ:
- ಸ್ಕೀಮ್ –**A** ಅಡಿ **173 TMC**
- ಸ್ಕೀಮ್ –**B** ಅಡಿ **130 TMC**
- ಒಟ್ಟು **303 TMC**
- ಸ್ಕೀಮ್–**A** ಅಡಿ ಹಂಚಿಕೆಯಾಗಿರುವ **173 TMC** ನೀರನ್ನು ಬಳಸಿಕೊಂಡು ಬರಪೀಡಿತ ಜಿಲ್ಲೆಗಳಾದ ಬಿಜಾಪುರ, ಬಾಗಲಕೋಟೆ, ಕಲಬುರಗಿ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ **16** ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ.
- ಈ ಯೋಜನೆಗೆ ಇಲ್ಲಿಯವರೆಗೆ **30,000** ಕೋಟಿ ರೂ ವೆಚ್ಚ ಮಾಡಲಾಗಿದೆ.
- ಸ್ಕೀಮ್ **B** ಅಡಿಯಲ್ಲಿ **130 TMC** ನೀರನ್ನು ಬಳಸಿಕೊಂಡು **14** ಲಕ್ಷ ಎಕರೆಗೆ ನೀರಾವರಿ ಕಲ್ಪಿಸಲು ಉದ್ದೇಶಿಸಲಾಗಿದೆ.
- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ-**3** ರ ಯೋಜನೆ ಅಡಿ **20** ಗ್ರಾಮಗಳು ಮುಳುಗಡೆ ಆಗುತ್ತಿದ್ದು, ಈ ಗ್ರಾಮಗಳ ಸ್ಥಳಾಂತರ ಮತ್ತು ಪುನರ್ ವಸತಿ ಕೇಂದ್ರಗಳ ನಿರ್ಮಾಣಕ್ಕೆ ಆದ್ಯತೆ.
- ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–**3** ಅನುಷ್ಠಾನ ಮತ್ತು ಅಗತ್ಯವಿರುವ **1,33,867** ಎಕರೆ ಜಮೀನನ್ನು ಭೂಸ್ವಾಧೀನ ಪಡೆಸಿಕೊಂಡು ಭೂ ಪರಿಹಾರ ನೀಡುವಲ್ಲಿ ಉಂಟಾಗುವ ತಾರತಮ್ಯಕ್ಕೆ ಏಕರೂಪ ದರ ನಿಗಡಿಪಡಿಸಿ ಸಮಸ್ಯೆ ಪರಿಹರಿಸಲಾಗುವುದು.
- ಈ ಯೋಜನೆಯ **3**ನೇ ಹಂತ ಅನುಷ್ಠಾನಗೊಳಿಸಲು **51** ಸಾವಿರ ಕೋಟಿ ರೂಗಳ ಅಗತ್ಯವೆಂದು ಅಂದಾಜಿಸಿದ್ದು, ಈ ಯೋಜನೆಗೆ ಇತ್ತೀಚಿನ ಸಾಲುಗಳಲ್ಲಿ **5** ಸಾವಿರ ಕೋಟಿ ರೂಗಳ ವಾರ್ಷಿಕ ಅನುದಾನ ಒದಗಿಸುತ್ತಿದ್ದು, ಈ ಅನುದಾನವನ್ನು **10** ಸಾವಿರ ಕೋಟಿಗೆ ಹೆಚ್ಚಿಸಲಾಗುವುದು ಮತ್ತು ಮುಂಬರುವ **5** ವರ್ಷಗಳಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.
- ಕೇಂದ್ರ ಸರಕಾರ ಮತ್ತು ಸುಪ್ರೀಂ ಕೋರ್ಟ್’ನಲ್ಲಿ ನೆರೆ ರಾಜ್ಯಗಳು ಹೂಡಿರುವ ನೆನೆಗುದಿಗೆ ಬಿದ್ದಿರುವ ಪ್ರಕರಣಗಳನ್ನು ತೆರವುಗೊಳಿಸಿ, ಜಲವಿವಾದ ಕಾಯ್ದೆ ಸೆಷನ್ **6(1)**ರ ಅಡಿಯಲ್ಲಿ ಕೇಂದ್ರ ಸರ್ಕಾರದಿಂದ ಅಧಿಕೃತ ಗೆಜೆಟ್‌ನಲ್ಲಿ ಅಂತಿಮ ನಿರ್ಧಾರ ಪ್ರಕಟವಾಗುವಂತೆ ಒತ್ತಾಯಿಸಲಾಗುವುದು.
- ಕೃಷ್ಣಾ ಮೇಲ್ದಂಡೆ ಯೋಜನೆ ಒಂದು ಪ್ರತಿಷ್ಠಿತ ಯೋಜನೆ ಆಗಿದ್ದು, ಈ ಯೋಜನೆಯನ್ನು ಕೇಂದ್ರ ಸರ್ಕಾರವು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಸರ್ವಪ್ರಯತ್ನ ಮಾಡಲಾಗುವುದು.



## ಭದ್ರಾ ಮೇಲ್ದಂಡೆ ಯೋಜನೆ

- ಈ ಯೋಜನೆ ಅಡಿ **29.90 TMC** ನೀರನ್ನು ಬಳಸಿಕೊಂಡು ಬರಪೀಡಿತ ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ ಮತ್ತು ತುಮಕೂರು ಜಿಲ್ಲೆಗಳ ಒಟ್ಟು **5.57** ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಹಾಗೂ **367** ಕೆರೆಗಳನ್ನು ತುಂಬಿಸಿ ಈ ಭಾಗದ ಕುಡಿಯುವ ನೀರಿನ ಬವಣೆಯನ್ನು ಬಗೆಹರಿಸಲು ಉದ್ದೇಶಿಸಲಾಗಿದೆ.
- ಈ ಯೋಜನೆಯ ಅಂದಾಜು ವೆಚ್ಚ **25** ಸಾವಿರ ಕೋಟಿ ರೂ.ಗಳಾಗಿದ್ದು, ಇದುವರೆಗೂ **5500** ಕೋಟಿ ರೂ.ಗಳಷ್ಟು ವೆಚ್ಚ ಮಾಡಲಾಗಿದೆ.
- ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆಯೆಂದು ಪರಿಗಣಿಸಿ **5,300** ಕೋಟಿ ರೂ.ಗಳ ಅನುದಾನವನ್ನು ಒದಗಿಸುವುದಾಗಿ ಕೇಂದ್ರ ಸರ್ಕಾರವು ಭರವಸೆ ನೀಡಿದ್ದಾದರೂ ಇದು ಇನ್ನೂ ಕಾರ್ಯಗತಗೊಳ್ಳಬೇಕಾಗಿದೆ.
- ಈ ಯೋಜನೆಗೆ ರಾಜ್ಯ ಸರ್ಕಾರ ವಾರ್ಷಿಕವಾಗಿ ಸರಾಸರಿ **2,000** ಕೋಟಿ ರೂ.ಗಳ ಅನುದಾನ ನೀಡುತ್ತಿದ್ದು, ಈ ಅನುದಾನವನ್ನು **5,000** ಕೋಟಿ ರೂ.ಗಳಿಗೆ ಏರಿಸಿ ಮುಂದಿನ **4** ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.



## ಮೇಕೆದಾಟು ಯೋಜನೆ

- ಈ ಯೋಜನೆಯು ಸಮಾನಂತರ ಜಲಾಶಯ ಹಾಗೂ ಕುಡಿಯುವ ನೀರಿನ ಯೋಜನೆಯಾಗಿದ್ದು, ಬೆಂಗಳೂರು ನಗರ ಮತ್ತು ಆಸುಪಾಸಿನ ವಸತಿ ಪ್ರದೇಶಗಳು ಎದುರಿಸುತ್ತಿರುವ ಕುಡಿಯುವ ನೀರಿನ ಕೊರತೆಯನ್ನು ನೀಗಿಸಲು **67 TMC** ಶೇಖರಣೆ ಸಾಮರ್ಥ್ಯವುಳ್ಳ ಅಣೆಕಟ್ಟು ಯೋಜನೆ.
- ಈ ಯೋಜನೆಯ ವಿಸ್ತೃತ ವರದಿಯನ್ನು ಜನವರಿ **2019** ರಲ್ಲಿ ಅನುಮೋದನೆಗಾಗಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆ. **4** ವರ್ಷಗಳು ಕಳೆದಿದ್ದರೂ ಈ ಯೋಜನೆಗೆ ಯಾವ ಅನುಮತಿ ದೊರಕಿರುವುದಿಲ್ಲ.
- ತಮಿಳುನಾಡು ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿ ಅರ್ಜಿ ಸಲ್ಲಿಸಿರುವುದು ಒಂದು ಕಾರಣವಾದರೆ, ತಾಂತ್ರಿಕ ಕಾರಣಗಳು ಹಲವಾರು ಇರುತ್ತವೆ.
- ಈ ಯೋಜನೆಯ ವೆಚ್ಚ **9** ಸಾವಿರ ಕೋಟಿ ರೂ.ಗಳೆಂದು ಅಂದಾಜಿಸಲಾಗಿದ್ದು, ಈಗಿನ ಅಂದಾಜಿನಂತೆ **13** ಸಾವಿರ ಕೋಟಿ ರೂ.ಗಳು ಆಗಬಹುದು.
- ಬೆಂಗಳೂರು ನಗರದ ಪ್ರಸ್ತುತ ಜನಸಂಖ್ಯೆ **136** ಲಕ್ಷ ಮುಂದಿನ **20** ರಿಂದ **25** ವರ್ಷಗಳಲ್ಲಿ ಇದು **300** ಲಕ್ಷ ದಾಟಬಹುದೆಂದು ನಿರೀಕ್ಷಿಸಲಾಗಿದ್ದು ಹಾಗಾಗಿ ಕುಡಿಯುವ ನೀರಿಗೆ ನಗರದ ಜನತೆ ಹಾಹಾಕಾರ ಪಡುವ ದಿನಗಳು ಬಹಳ ದೂರವಿರುವುದಿಲ್ಲ.
- ಈ ಯೋಜನೆಗೆ ಅವಶ್ಯವಿರುವ ಅನುಮತಿಗಳನ್ನು ತ್ವರಿತಗತಿಯಲ್ಲಿ ಪಡೆದುಕೊಳ್ಳಲು ಮತ್ತು ಕಾನೂನಿನ ತೊಡಕುಗಳನ್ನು ಸಮರ್ಥವಾಗಿ ನಿವಾರಿಸಿಕೊಳ್ಳಲು ಹಾಗೂ ತಾಂತ್ರಿಕ ಸಲಹೆ ಪಡೆದು ಬೆಂಗಳೂರು ನಗರ ಜನತೆಯ ಹಿತದೃಷ್ಟಿಯಿಂದ ಮತ್ತು ರಾಜ್ಯಕ್ಕೆ ಹಂಚಿಕೆ ಮಾಡಲಾದ ನೀರಿನ ಪರಿಮಿತಿಯಲ್ಲಿ ಯೋಜನೆಯ ವಿನ್ಯಾಸವನ್ನು ಮರುಪರಿಶೀಲನೆಗೆ ಒಳಪಡಿಸಿ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡು ಈ ಯೋಜನೆಯನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗುವುದು.

## ಮಹಾದಾಯಿ ಯೋಜನೆ



- ಈ ಯೋಜನೆ ಅಡಿ ಅವಳಿ ನಗರಗಳಾದ ಹುಬ್ಬಳ್ಳಿ–ಧಾರವಾಡ ನಗರಗಳಲ್ಲಿ ವಾಸಿಸುವ **20** ಲಕ್ಷ ಜನತೆಗೆ ಕುಡಿಯುವ ನೀರಿಗಾಗಿ ಮಹಾದಾಯಿ ನದಿ ಪಾತ್ರದಿಂದ ಮಲಪ್ರಭಾ ನದಿಯ ಉಪನದಿ ಪಾತ್ರಕ್ಕೆ ತಿರುಗಿಸುವ ಯೋಜನೆ.
- ಮಹಾದಾಯಿ ಜಲವಿವಾದ ನ್ಯಾಯಮಂಡಳಿ ರಾಜ್ಯಕ್ಕೆ **13.42 TMC** ನೀರನ್ನು ಹಂಚಿಕೆ ಮಾಡಿದ್ದು, ಅದರಂತೆ ವಿಸ್ತೃತ ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ.
- ಈ ಯೋಜನೆಯ ವಿಸ್ತೃತ ವರದಿಗೆ ಕೇಂದ್ರ ಜಲಶಕ್ತಿ ಮತ್ತು ಪರಿಸರ ಮಂತ್ರಾಲಯಗಳಿಂದ ಅಗತ್ಯವಿರುವ ಅನುಮತಿ ಬಾಕಿ ಇವೆ.
- ಈ ಯೋಜನೆಗೆ ಅಗತ್ಯವಿರುವ ಅನುಮತಿ ಪಡೆದು, ಅನುದಾನ ನೀಡಿ, ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಲಾಗುವುದು.

## ಎತ್ತಿನಹೊಳೆ ಯೋಜನೆ

- ಇದು ಸಂಪೂರ್ಣ ಕುಡಿಯುವ ನೀರಿನ ಯೋಜನೆ.
- ಪಶ್ಚಿಮ ಘಟ್ಟದಲ್ಲಿ ಉದಯಿಸಿ, ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರ ಸೇರುವ ಎತ್ತಿನಹೊಳೆ ಜಲಸಮೂಹದಿಂದ 24 **TMC** ನೀರನ್ನು ಮೇಲೆತ್ತಿ ಪೂರ್ವಕ್ಕೆ ತಿರುಗಿಸಿ ಅತ್ಯಂತ ಜಲಕ್ಷಾಮದಿಂದ ಸದಾಕಾಲ ಬಳಲುವ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 527 ಕೆರೆಗಳನ್ನು ತುಂಬಿಸುವ ಯೋಜನೆ.
- ಪಶ್ಚಿಮ ಘಟ್ಟದಲ್ಲಿರುವ ಸಕಲೇಶಪುರದ ಎತ್ತಿನಹೊಳೆಯಿಂದ ನೀರನ್ನು ಎತ್ತಿ ಗುರುತ್ವಾಕರ್ಷಣ ಕಾಲುವೆ ಮುಖೇನ ಹಾಸನ ಮತ್ತು ತುಮಕೂರು ಜಿಲ್ಲೆಗಳ ಮುಖೇನ ಹಾದು ಕೊರಟಗೆರೆ ತಾಲ್ಲೂಕಿನಲ್ಲಿ ನಿರ್ಮಿಸಿರುವ ಬೈರಗೊಂಡಲು ಜಲಾಶಯಕ್ಕೆ ನೀರು ಬಿಡಲಾಗುತ್ತದೆ.
- ಈ ಯೋಜನೆ ಅಡಿ ಹಾಸನ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿನ ಒಟ್ಟು 8864 ಕೆರೆಗಳನ್ನು ತುಂಬಿಸುವ ಹಾಗೂ ತಿಪ್ಪಗೊಂಡನಹಳ್ಳಿ ಜಲಾಶಯ ಮತ್ತು ಹೆಸರಘಟ್ಟ ಜಲಾಶಯಗಳಿಗೆ ನೀರು ತುಂಬಿಸುವ ಯೋಜನೆ ಇದೆ.
- ಈ ಯೋಜನೆಗೆ ಇದುವರೆಗೂ **11500** ಕೋಟಿ ರೂ.ಗಳು ವೆಚ್ಚವಾಗಿದ್ದು, ಯೋಜನೆಯನ್ನು ಪೂರ್ಣಗೊಳಿಸಲು ಇನ್ನೂ **12500** ಕೋಟಿ ರೂ.ಗಳ ಅವಶ್ಯಕತೆ ಇರುತ್ತದೆ.
- ಯೋಜನಾ ವಿನ್ಯಾಸ ಹಲವು ಬಾರಿ ಮಾರ್ಪಡಿಸಲಾಗಿದೆ ಮತ್ತು ಯೋಜನೆ ಉದ್ದೇಶ ವಿಸ್ತರಿಸಲಾಗಿದೆ. ಆದ್ದರಿಂದ ಮೂಲ ಉದ್ದೇಶಕ್ಕೆ ಧಕ್ಕೆ ಇಲ್ಲದೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಜನತೆಯ ಅಶೋತ್ತರಗಳನ್ನು ಸಫಲಗೊಳಿಸಲು ಪ್ರತಿ ವರ್ಷ ಈ ಯೋಜನೆಗೆ **3** ಸಾವಿರ ಕೋಟಿ ರೂಗಳ ಅನುದಾನ ಒದಗಿಸಿ ಮುಂದಿನ **4** ವರ್ಷಗಳಲ್ಲಿ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

# ರಸ್ತೆ ಅಭಿವೃದ್ಧಿ-ಸಂಪರ್ಕ ಸೇತುವೆಗಳು

## ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (KRDCL)



### ಸೇತುವೆ ನಿರ್ಮಾಣ

- ರಾಜ್ಯದ ವಿವಿಧ ಸ್ಥಳಗಳಲ್ಲಿರುವ **100** ಬೃಹತ್ ಸೇತುವೆಗಳ ಆಗಲೀಕರಣ, ಪುನಃಶ್ಚೇತನ ಮತ್ತು ನಿರ್ಮಾಣ - ಅಂದಾಜು ಮೊತ್ತ-**2000** ಕೋಟಿ ರೂ.ಗಳು

### ಸಂಪರ್ಕ ರಸ್ತೆಗಳ ಅಭಿವೃದ್ಧಿ

- ವಾಹನ ಸಂಚಾರದ ದಟ್ಟಣೆ ನಿಯಂತ್ರಿಸಲು ಪ್ರಮುಖ ರಸ್ತೆ ಸಂಪರ್ಕಜಾಲಕ್ಕೆ ಆದ್ಯತೆ ಹಾಗೂ ಅವಶ್ಯಕತೆಗೆ ಅನುಗುಣವಾಗಿ **10** ಸಾವಿರ ಕಿ.ಮೀ. ಉದ್ದದ ರಸ್ತೆಗಳನ್ನು ಅಭಿವೃದ್ಧಿ ಮಾಡಲು **10** ಸಾವಿರ ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದ ಯೋಜನೆಯಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

## ಬೆಂಗಳೂರು ನಗರದ ವಾಹನ ದಟ್ಟಣೆ ಕಡಿಮೆ ಮಾಡಲು ನಗರದ ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿಯೋಜನೆ

- ರಾಜ್ಯದ ವಿವಿಧ ಸ್ಥಳಗಳಲ್ಲಿರುವ **100** ಬೃಹತ್ ಸೇತುವೆಗಳ ಆಗಲೀಕರಣ, ಪುನಃಶ್ಚೇತನ ಮತ್ತು ನಿರ್ಮಾಣ - ಅಂದಾಜು ಮೊತ್ತ-**2000** ಕೋಟಿ ರೂ.ಗಳು
- ಬೆಂಗಳೂರು ನಗರದ ವಾಹನ ದಟ್ಟಣೆ ಕಡಿಮೆ ಮಾಡಲು ನಗರದ ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿಯೋಜನೆ.
- (1) ಮಾಕಳಿ ಬಳಿ ರಾಷ್ಟ್ರೀಯ ಹೆದ್ದಾರಿ-**48** ರಿಂದ **(APMC)** ತೋಟಗೆರೆ ಮಾರ್ಗವಾಗಿ ಮದುರೆ ವರೆಗಿನ **18**ಕಿ.ಮೀ ಉದ್ದದ ರಸ್ತೆಯನ್ನು ನಾಲ್ಕು ಪಥದ ರಸ್ತೆಯಾಗಿ ಅಭಿವೃದ್ಧೀಕರಣ - ಅಂದಾಜು ಮೊತ್ತ-**450** ಕೋಟಿ ರೂ.ಗಳು
- (2) ನೆಲಮಂಗಲ ಬಳಿ ರಾಷ್ಟ್ರೀಯ ಹೆದ್ದಾರಿ-**48** ರಿಂದ ಸೊಂಡೆಕೊಪ್ಪ-ತಾವರೆಕೆರೆ ಮಾರ್ಗವಾಗಿ ಬಿಡದಿ ವರೆಗಿನ **40**ಕಿಮೀ ಉದ್ದದ ರಸ್ತೆಯನ್ನು ನಾಲ್ಕು ಪಥದ ರಸ್ತೆಯಾಗಿ ಅಭಿವೃದ್ಧೀಕರಣ - ಅಂದಾಜು ಮೊತ್ತ-**800** ಕೋಟಿ ರೂ.ಗಳು



## ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (KSHIP)

- ಹೆದ್ದಾರಿಗಳು ರಾಜ್ಯದ ಪ್ರಗತಿಯ ವಾಹನಗಳು
- ರಾಜ್ಯದಲ್ಲಿ ವಾಹನ ಸಂಚಾರ ದಟ್ಟಣೆ ದಿನೇ ದಿನೇ ಹೆಚ್ಚುತ್ತಿದ್ದು, ರಾಷ್ಟ್ರೀಯ ಹೆದ್ದಾರಿ ಮತ್ತು ಕೈಗಾರಿಕೆ ವಸಾಹತುಗಳಿಗೆ ಸಂಪರ್ಕ ಕಲ್ಪಿಸುವ, ರೈತರ ಕೃಷಿ ಉತ್ಪನ್ನಗಳನ್ನು ಮಾರುಕಟ್ಟೆಗೆ ಕೊಂಡೊಯ್ಯುವ, ರಾಜ್ಯದ ಗಡಿ ಭಾಗಗಳಿಗೆ ಸಂಪರ್ಕ ಕಲ್ಪಿಸುವ ಹಾಗೂ ಪದೇ ಪದೇ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾಗುವ ರಾಜ್ಯ ಹೆದ್ದಾರಿಗಳನ್ನು ಗುರುತಿಸಿ ಅಭಿವೃದ್ಧಿ ಪಡಿಸುವುದು ಅತ್ಯವಶ್ಯಕವಾಗಿದೆ. ಈ ಹಿನ್ನಲೆಯಲ್ಲಿ **1400** ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು **4** ಸಾವಿರ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಬಾಹ್ಯ ನೆರವಿನೊಂದಿಗೆ ಅಭಿವೃದ್ಧಿ ಪಡಿಸಲಾಗುವುದು.

## ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ (SHDP)

- ರಾಜ್ಯದಲ್ಲಿ ಬಹುತೇಕ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳು ಮಧ್ಯ ಪಥ ಅಥವಾ ಏಕಪಥಗಳಾಗಿರುತ್ತದೆ.
- ಈ ರಸ್ತೆಗಳನ್ನು ದ್ವಿಪಥ ಹಾಗೂ ಮಧ್ಯಮ ಪಥಕ್ಕೆ ಅಗಲೀಕರಣ ಹಾಗೂ ಮರು ನಿರ್ಮಾಣ ಅತ್ಯವಶ್ಯವಾಗಿದೆ.
- ಈ ಯೋಜನೆಯಡಿ **1000** ಕೀ.ಮೀ. ಉದ್ದದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಸಮಗ್ರ ಅಭಿವೃದ್ಧಿಯನ್ನು **15** ಸಾವಿರ ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲಾಗುವುದು.

## ಯೋಜನೆ ಮತ್ತು ರಸ್ತೆಗಳ ಆಸ್ತಿ ನಿರ್ವಹಣಾ ಕೇಂದ್ರ (PRAMC) -ಅಡಿ ಅಪಘಾತ ಸ್ಥಳಗಳ ಹಾಗೂ ರಸ್ತೆ ಸುರಕ್ಷತಾ ಕ್ರಮಗಳು



- **PRAMC,** ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರದಿಂದ ಗುರುತಿಸಲಾಗಿರುವ ಅಪಘಾತ ಕಪ್ಪು ಸ್ಥಳಗಳನ್ನು **(Black Spots)** ಸರಿಪಡಿಸುವುದು ಮತ್ತು ರಸ್ತೆ ಸುರಕ್ಷತಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ.
- ಈ ಯೋಜನೆಯಡಿ ರಸ್ತೆ ಸುರಕ್ಷತಾ ಅಂಗವಾಗಿ ಒಂದು ಹೆದ್ದಾರಿಯಿಂದ ಇನ್ನೊಂದು ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಸಂಪರ್ಕ ರಸ್ತೆ ಯೋಜನೆಯ **590 T & Y** ಅಪಘಾತ ಕೊಂಡಿ ಹೊಂದಿರುವ ಸ್ಥಳಗಳ ಅಭಿವೃದ್ಧಿಯನ್ನು ಅಂದಾಜು ಮೊತ್ತ **800** ಕೋಟಿ ರೂಗಳಲ್ಲಿ ಕೈಗೆತ್ತಿಕೊಳ್ಳಲಾಗುವುದು.
- ನಾಲೆಗಳ ಬದಿಯಲ್ಲಿ ರಸ್ತೆ ಸುರಕ್ಷತಾ ಕಾಮಗಾರಿಗಳು ಮತ್ತು ಬ್ಯಾರಿಕೇಡಿಂಗ್ ಸುಧಾರಣೆಗಳು ಕಾರ್ಯಕ್ರಮದಡಿಯಲ್ಲಿ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳಲ್ಲಿ **200** ಅಪಘಾತ ಸ್ಥಳಗಳಲ್ಲಿ ಕ್ರಾಸ್ ಬ್ಯಾರಿಯರ್ ಮತ್ತು ಇತರೆ ರಸ್ತೆ ಸುರಕ್ಷತಾ ಕ್ರಮಗಳನ್ನು **500** ಕೋಟಿ ರೂಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗುವುದು.

## ಶಾಲಾ ಸಂಪರ್ಕ ಸೇತುವೆಗಳ ನಿರ್ಮಾಣ

- ರಾಜ್ಯದ ಪಶ್ಚಿಮ ಘಟ್ಟ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ಶಾಲಾ ಮಕ್ಕಳು ಮತ್ತು ಜನರು ತಮ್ಮ ದೂರದ ಮನೆಗಳಿಂದ ಪಟ್ಟಣಗಳಿಗೆ, ಸಂತೆಗಳಿಗೆ ಮತ್ತು ಮಕ್ಕಳು ಶಾಲೆಗಳಿಗೆ ಹೋಗಲು ಮರದ ದಿಮ್ಮಿಯಿಂದ ನಿರ್ಮಿಸಿರುವ ಕಾಲು ಸಂಕಗಳ ಮುಖೇನ ಸಂಚರಿಸುವರು. ಕೆಲವೊಂದು ಪ್ರದೇಶಗಳಲ್ಲಿ ತೊರೆಗಳು ಮತ್ತು ನದಿಗಳು ರಭಸವಾಗಿ ಹರಿಯುವುದರಿಂದ, ಶಾಲಾ ಮಕ್ಕಳು ಮರದ ದಿಮ್ಮಿ ಮೇಲೆ ಸಂಚರಿಸಲು ಹೆದರಿ **3** ತಿಂಗಳ ಕಾಲ ಬಲವಂತವಾಗಿ ಶಾಲೆಯಿಂದ ಹೊರ ಉಳಿಯುತ್ತಾರೆ.
- ಗುಡ್ಡಗಾಡಿನಲ್ಲಿ ವಾಸಿಸುವ ಜನರ ಮತ್ತು ಶಾಲಾ ಮಕ್ಕಳಿಗೆ ಸಂಪರ್ಕ ಕಲ್ಪಿಸಲು ಪಶ್ಚಿಮ ಘಟ್ಟ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಕಾಲು ಸಂಕ ಇರುವ **1314** ಸ್ಥಳಗಳನ್ನು ಗುರುತಿಸಲಾಗಿದ್ದು, ಈ ಸ್ಥಳಗಳಲ್ಲಿ ಶಾಲಾ-ಸಂಪರ್ಕ ಸೇತುವೆಗಳನ್ನು **185** ಕೋಟಿ ರೂಗಳ ಅಂದಾಜು ವೆಚ್ಚಗಳಲ್ಲಿ ತುರ್ತಾಗಿ ನಿರ್ಮಿಸಲಾಗುವುದು.

# ಇಂಧನ ವಲಯ



## ಜಲ - ಸೌರ - ಪವನ ಶಕ್ತಿ

- ರಾಜ್ಯವನ್ನು ಹಸಿರು ಇಂಧನ ವಲಯವನ್ನಾಗಿ ರೂಪಿಸಲು ಅಸಂಪ್ರದಾಯಿಕ ಇಂಧನ ಉತ್ಪಾದನೆಗೆ ಒತ್ತು ನೀಡಲಾಗುವುದು.
- ಉದ್ಯಮಗಳು ಕಡ್ಡಾಯವಾಗಿ ಖರೀದಿಸಬೇಕಾಗಿರುವ ಅಸಂಪ್ರದಾಯಿಕ ವಲಯದ ಇಂಧನ ಪ್ರಮಾಣವನ್ನು ಶೇ15 ರಷ್ಟು ಏರಿಸುವುದು. **RPO (Renewable power obligation) increased up to 15% .**
- ಉದ್ಯಮಗಳು ಹಸಿರು ಇಂಧನವನ್ನು ಹೆಚ್ಚುಗೊಳಿಸಲು ಪ್ರೋತ್ಸಾಹ ಕ್ರಮ ಕೈಗೊಳ್ಳಲಾಗುವುದು.
- ಐರೋಪ್ಯ ದೇಶಗಳಲ್ಲಿ ಈಗಾಗಲೇ ಜಾರಿಗೆ ಬಂದಿರುವ (CBAM)ಹೊಸ ಕಾನೂನಿನನ್ವಯ ಮಾನದಂಡವನ್ನು ತಲುಪಲು, ನಮ್ಮ ಉದ್ಯಮಗಳ ವಸ್ತುಗಳನ್ನು ರಫ್ತುಗೊಳಿಸಲು ಸುರಕ್ಷಿತಗೊಳಿಸುವ ಕಾರ್ಬನೀಕರಣ(De-corbonizion) ಇಲ್ಲದಂತೆ ಮಾಡಲು ಸರಕಾರ ವತಿಯಿಂದ ಪ್ರೋತ್ಸಾಹಿತ ಕಾರ್ಯಕ್ರಮ ಕೈಗೊಳ್ಳಲಾಗುವುದು.
- ಐಟಿ, ಇ ಕಾಮರ್ಸ್ ಮತ್ತು ಡಾಟಾ ಸೆಂಟರ್‌ಗಳಲ್ಲಿ ಪೂರ್ಣ ಹಸಿರು ಇಂಧನ ಬಳಕೆಯನ್ನು ಮಾಡುವಂತಾಗಲು ವಿಶೇಷ ಯೋಜನೆ.
- ಸೌರ ವಿದ್ಯುತ್ ಮತ್ತು ಪವನ ವಿದ್ಯುತ್ತನ್ನು ರಾಜ್ಯದಲ್ಲಿ ಹೆಚ್ಚು ಮಾಡಲು ಉತ್ತರ ಕರ್ನಾಟಕ ಭಾಗದಲ್ಲಿ ಸೋಲಾರ್ ಪಾರ್ಕ್ ಹಾಗೂ ಹೈಬ್ರಿಡ್ ಪಾರ್ಕ್ ಸ್ಥಾಪನೆ.
- ಸಣ್ಣ ಪ್ರಮಾಣದ ಪವನ ವಿದ್ಯುತ್ ಉದ್ಯಮಿದಾರರಿಗೆ **(up to 25mw)** ಪವನ ವಿದ್ಯುತ್ ಅನ್ನು ಸ್ಥಾಪಿಸಲು ಪ್ರೋತ್ಸಾಹಿಸುವ ಸಲುವಾಗಿ **FIT (Feed in tariff )** ನಲ್ಲಿ **PPA (Power Purchase Agreement)** ಮಾಡಿ ಸ್ಥಾಪಿಸಲು ಉತ್ತೇಜನ ನೀಡಲು ಕ್ರಮ ಕೈಗೊಳ್ಳುವುದು.

## ಕೇಂದ್ರ ವಿದ್ಯುಚ್ಛಕ್ತಿ ಕಾಯ್ದೆ – 2022 – ಅನುಷ್ಠಾನಕ್ಕೆ ವಿರೋಧ



- ಕೇಂದ್ರ ವಿದ್ಯುಚ್ಛಕ್ತಿ ತಿದ್ದುಪಡಿ ಕಾಯ್ದೆ - **2003** ರ ಅನುಷ್ಠಾನದಲ್ಲಿ ವಿದ್ಯುಚ್ಛಕ್ತಿ ಕಂಪನಿಗಳನ್ನು ಖಾಸಗೀಕರಣಗೊಳಿಸುವ ಹುನ್ನಾರವಿದ್ದು ಇಂತಹ ವ್ಯವಸ್ಥೆಯಲ್ಲಿ ರಾಜ್ಯದ ವಿದ್ಯುತ್ ಕಂಪನಿಗಳಿಗೆ, ರಾಜ್ಯದ ರೈತರಿಗೆ, ಗ್ರಾಹಕರಿಗೆ ಹಾಗೂ ಕೈಗಾರಿಕೆ ಉದ್ಯಮಿಗಳಿಗೆ ಅಪಾರ ನಷ್ಟ ಉಂಟಾಗುತ್ತದೆ
- ಖಾಸಗೀಕರಣದಿಂದ ವಿದ್ಯುಚ್ಛಕ್ತಿ ಕಂಪನಿಗಳ ನೌಕರರ ಉದ್ಯೋಗಕ್ಕೆ ಮತ್ತು ಗ್ರಾಹಕರ ಹಿತಕ್ಕೆ ಧಕ್ಕೆ ಉಂಟಾಗುವ ಕಾಯ್ದೆಯನ್ನು ವಿರೋಧಿಸಿ, ಎಲ್ಲಾ ವರ್ಗದ ಜನರ ಹಿತ ಕಾಪಾಡಲು ಖಾಸಗೀಕರಣ ಗೊಳಿಸಲು ಉದ್ದೇಶಿಸಿರುವ ಕೇಂದ್ರ ವಿದ್ಯುಚ್ಛಕ್ತಿ ಕಾಯ್ದೆ **-2022** ನ್ನು ರಾಜ್ಯದಲ್ಲಿ ಅನುಷ್ಠಾನಗೊಳಿಸುವುದನ್ನು ವಿರೋಧಿಸುತ್ತೇವೆ ಮತ್ತು ಅನುಷ್ಠಾನಕ್ಕೆ ಅವಕಾಶ ನೀಡುವುದಿಲ್ಲ.

# ಆಡಳಿತ ಸುಧಾರಣೆ



## ಜಿಲ್ಲಾ ಮತ್ತು ತಾಲ್ಲೂಕು ಆಡಳಿತ ಸುಧಾರಣೆ

- ರಾಜ್ಯದಲ್ಲಿ ಉತ್ತಮ ಜಿಲ್ಲಾಡಳಿತ ವ್ಯವಸ್ಥೆಗೆ ಹಾಗೂ ಜನತೆಯ ಬೇಡಿಕೆ ಮೇಲೆ **1956**ರಲ್ಲಿ ರಾಜ್ಯ ಪುನರ್ ವಿಂಗಡಣೆ ಮಾಡಿದ ನಂತರ ಹೊಸದಾಗಿ **21** ಹೊಸ ಜಿಲ್ಲೆಗಳನ್ನು ಸೃಜಿಸಲಾಗಿದೆ. ರಾಜ್ಯದಲ್ಲಿನ ಒಟ್ಟು ಜಿಲ್ಲೆಗಳು–**31**.
- ಅದೇ ರೀತಿ ಜನತೆಯ ದೈನಂದಿನ ಅಗತ್ಯ ದಾಖಲೆಗಳನ್ನು ಮತ್ತು ಸೇವೆಗಳನ್ನು ಪಡೆಯಲು ರಾಜ್ಯ ಸರ್ಕಾರ **1956**ರ ನಂತರ–**56** ಹೊಸ ತಾಲ್ಲೂಕುಗಳನ್ನು ಸೃಜಿಸಿದೆ. ರಾಜ್ಯದಲ್ಲಿರುವ ಒಟ್ಟು ತಾಲ್ಲೂಕುಗಳು-**237**. ಆದರೆ, ಹೊಸದಾಗಿ ಸೃಜಿಸಿದ ಜಿಲ್ಲೆಗಳು ನೀತಿ ಆಯೋಗದ **Multi – Dimensional Poverty Index (MPI)** ಮತ್ತು **Hunger Poverty Index** ಗಳಲ್ಲಿ ತಳಹಂತದಲ್ಲಿ ಇವೆ.
- ಮುಂದುವರೆದು ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯ ತಹಶೀಲ್ದಾರ್ ಕಚೇರಿ ಮಾತ್ರ ತೆರೆದಿದ್ದಾರೆ. ಆದರೆ, ಇತರೆ ಅಭಿವೃದ್ಧಿ ಇಲಾಖೆ ಕಚೇರಿ ಗಳನ್ನು ಪೊಲೀಸ್ ಇಲಾಖೆ, ಸಬ್‌ರಿಜಿಸ್ಟರ್ ಕಚೇರಿ ಗಳು ಇನ್ನೂ ತೆರೆದಿಲ್ಲ.
- ಈ ಹಿನ್ನೆಲೆಯಲ್ಲಿ ಜಿಲ್ಲಾ ಮತ್ತು ತಾಲ್ಲೂಕು ಆಡಳಿತಗಳನ್ನು ಸುವ್ಯವಸ್ಥೆಯಲ್ಲಿಡಲು ಅಗತ್ಯವಿರುವ ಕಚೇರಿ ಕಟ್ಟಡಗಳನ್ನು ನಿರ್ಮಿಸಿ, ಮೂಲಸೌಕರ್ಯಗಳನ್ನು ಕಲ್ಪಿಸಿ, ಜನತೆಯ ಸೇವೆಗೆ ಸಿದ್ಧವಿಡಲು ಕ್ರಮ ಕೈಗೊಳ್ಳಲಾಗುವುದು.

## ಭೂ ಕಂದಾಯ ಸರ್ವೆ ಸಮಸ್ಯೆಗೆ ಪರಿಹಾರ

- ಕಂದಾಯ ಇಲಾಖೆ ಮತ್ತು ಭೂಮಾಪನ ಇಲಾಖೆಗಳಲ್ಲಿ ದಾಖಲೆಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸುವುದು ಅತ್ಯಂತ ಅವಶ್ಯ.
- ಭೂ ಸಮೀಕ್ಷೆಯಲ್ಲಿ ಜನರಿಗೆ ನೀಡಬೇಕಾಗುವ ಸರ್ವೆ ಸ್ಕೆಚ್-**11** ಇ-ನಕ್ಷೆ, ಭೂ ಪರಿವರ್ತನೆ ನಕ್ಷೆ, ಹದ್ದುಬಸ್ತು, ತತ್ಕಾಲ್ ಪೋಡಿ ಮತ್ತು ಭೂಸ್ವಾಧೀನ ನಕ್ಷೆ (ಜೆಎಂಸಿ ನಕ್ಷೆ) ಹಾಗೂ ಆಲಿನೇಷನ್ ಪೋಡಿ ಮುಂತಾದುವಗಳಲ್ಲಿ ವರ್ಷಾನುಗಟ್ಟಲೆ ವಿಳಂಬವಾಗುತ್ತಿದೆ.
- ಜಮೀನುಗಳನ್ನು ಅಳತೆ ಮಾಡಿ ನಂತರದಲ್ಲಿ ಕಂದಾಯ ಮತ್ತು ಸರ್ವೆ ಇಲಾಖೆಗಳ ದಾಖಲೆಗಳಲ್ಲಿ ಇಂಡೀಕರಣ ಮಾಡಲು ಸಹ ಅತಿ ವಿಳಂಬವಾಗುತ್ತಿದೆ.
- ಭೂಮಾಲಿಕರ ಜಮೀನುಗಳನ್ನು ಡ್ರೋನ್ ಸರ್ವೆ ಒಳಗೊಂಡಂತೆ ವಿವಿಧ ರೀತಿಯ ಸರ್ವೆ ಕಾರ್ಯಾಚರಣೆ, ರೆವೆನ್ಯೂ & ಸರ್ವೆ ಇಲಾಖೆಗಳ ಇಂಡೀಕರಣ ಮತ್ತು ದಾಖಲೆ ಡಿಜಿಟಲೀಕರಣಗಳನ್ನು ವಿವಿಧ ಯೋಜನೆಯಡಿ ಕೈಗೊಂಡು ಜನರಿಗೆ ವ್ಯವಸ್ಥಿತ ರೀತಿಯಲ್ಲಿ ಸೇವೆ ಒದಗಿಸಲು ಬದ್ಧ.

## ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಪ್ರಾಧಿಕಾರಗಳ ಬಲವರ್ಧನೆ

- ರಾಜ್ಯದಲ್ಲಿ ಈ ಕೆಳಕಂಡ ಮಂಡಳಿ, ಅಭಿವೃದ್ಧಿ ಪ್ರಾಧಿಕಾರಗಳನ್ನು ಮತ್ತು ಪ್ರದೇಶಗಳ ಅಸಮತೋಲನ ಮತ್ತು ಹಿಂದುಳಿದ ಪ್ರದೇಶಗಳ ಸಮಗ್ರ ಅಭಿವೃದ್ಧಿಗೆ ವಿವಿಧ ಕಾಯಿದೆ ಅಡಿ ಮಂಡಳಿಗಳನ್ನು ರಚಿಸಲಾಗಿದೆ.

1. ಬಯಲು ಸೀಮೆ ಅಭಿವೃದ್ಧಿ ಮಂಡಳಿ.
2. ಮಲೆನಾಡು ಅಭಿವೃದ್ಧಿ ಮಂಡಳಿ.
3. ಕರಾವಳಿ ಅಭಿವೃದ್ಧಿ ಮಂಡಳಿ.
4. ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ.
5. ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ.

- ಇವುಗಳು ಸ್ಥಾಪನೆಯಾಗಿ ಹಲವಾರು ದಶಕಗಳು ಕಳೆದರೂ ಮೇಲಿನ ಅಭಿವೃದ್ಧಿ ಪ್ರಾಧಿಕಾರಗಳು ಆರ್ಥಿಕ ಕೊರತೆಯಿಂದ ನಿರೀಕ್ಷಿತ ಪ್ರದೇಶಾಭಿವೃದ್ಧಿಯನ್ನು ಕೈಗೊಂಡಿಲ್ಲ. ಈ ಅಭಿವೃದ್ಧಿ ಪ್ರಾಧಿಕಾರಗಳು ವಿವಿಧ ವಲಯಗಳ ಅಭಿವೃದ್ಧಿಗೆ ತಯಾರಿಸಿರುವ ಕ್ರಿಯಾ ಯೋಜನೆಯ ಅಗತ್ಯತೆಗೆ ಅನುಗುಣವಾಗಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಿ ಈ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು.

## ಸ್ಥಳೀಯ ನಗರ ಸಂಸ್ಥೆಗಳ ಬಲವರ್ಧನೆ



- ರಾಜ್ಯದಲ್ಲಿನ ಹಲವಾರು ಪುರಸಭೆ, ನಗರಸಭೆ, ನಗರ ಪಾಲಿಕೆ ಮತ್ತು ಮಹಾನಗರ ಪಾಲಿಕೆಗಳ ಕಾಲಾವಧಿ ಮುಗಿದು ಹಲವಾರು ವರ್ಷಗಳು ಕಳೆದಿದ್ದರೂ ರಾಜ್ಯ ಸರ್ಕಾರ ಚುನಾವಣೆ ನಡೆಸಲು ಕ್ರಮ ಕೈಗೊಂಡಿಲ್ಲ.
- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಒಳಗೊಂಡಂತೆ ಹಲವಾರು ಸ್ಥಳೀಯ ನಗರ ಸಂಸ್ಥೆಗಳ ಕ್ಷೇತ್ರ ವಿಂಗಡಣಾ ಕ್ರಮ ಇನ್ನೂ ಮುಗಿದಿಲ್ಲ.
- ಹಿಂದುಳಿದ ವರ್ಗಗಳಿಗೆ ಸಂಬಂಧಿಸಿದಂತೆ ಕ್ಷೇತ್ರವಾರು ಮೀಸಲಾತಿ ನೆನೆಗುದಿಗೆ ಬಿದ್ದಿದೆ.
- ರಾಜ್ಯ ಸರ್ಕಾರದ ಹಿಂದುಳಿದ ವರ್ಗಗಳ ಮೀಸಲಾತಿ ಅಧಿಸೂಚನೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನಲ್ಲಿ ಪ್ರಶ್ನಿಸಲಾಗಿದ್ದು, ಈ ನ್ಯೂನ್ಯತೆಗಳನ್ನು ಸರಿಪಡಿಸಿ ಚುನಾವಣೆಗಳನ್ನು ತುರ್ತಾಗಿ ನಡೆಸಿ ನಾಗರೀಕರಿಗೆ ಸೇವೆ ಒದಗಿಸಲು ಮುಂದಾಗುವುದು.
- ಪ್ರತಿಯೊಂದು ಸ್ಥಳೀಯ ನಗರ ಸಂಸ್ಥೆಗಳಲ್ಲಿ ನಗರ ಮಟ್ಟದ ವಾರ್ಡ್ ಸಮಿತಿಗಳನ್ನು ಮತ್ತು ನೆರೆಹೊರೆ ಸಮಿತಿಗಳನ್ನು ಸ್ಥಾಪಿಸಲು ಪಕ್ಷ ಕಟಿಬದ್ಧವಾಗಿದೆ.
- ಸಂವಿಧಾನದ **74**ನೇ ತಿದ್ದುಪಡಿಯಂತೆ ನಗರ ಯೋಜನಾ ಮಂಡಳಿಗಳನ್ನು ಮತ್ತು ಜಿಲ್ಲಾ ಯೋಜನಾ ಘಟಕಗಳನ್ನು ಸ್ಥಾಪಿಸಿ, ಕಾರ್ಯ ವಿಧಾನಗಳನ್ನು ನಿಭಾಯಿಸಲು ಅಧಿಕಾರ ನೀಡಲಾಗುವುದು.



## ಪಂಚಾಯತ್ ರಾಜ್ ಸಂಸ್ಥೆಗಳ ಮತ್ತು ಸ್ಥಳೀಯ ನಗರ ಸಂಸ್ಥೆಗಳ ಬಲವರ್ಧನೆಗಾಗಿ ಸ್ವಾಯತ್ತತೆ ಮತ್ತು ಆರ್ಥಿಕ ಸ್ವಾವಲಂಬನೆ

- ಭಾರತದ ಸಂವಿಧಾನದ **73**ನೇ ಮತ್ತು **74**ನೇ ತಿದ್ದುಪಡಿಯಲ್ಲಿ ಪಂಚಾಯತ್ ರಾಜ್ ಮತ್ತು ಸ್ಥಳೀಯ ನಗರ ಸಂಸ್ಥೆಗಳಿಗೆ ಅಧಿಕಾರ ವಿಕೇಂದ್ರೀಕರಣ, ಸ್ವಾಯತ್ತತೆ ಮತ್ತು ಆರ್ಥಿಕ ಸ್ವಾವಲಂಬನೆಗೆ ಒತ್ತು ನೀಡಲಾಗಿದೆ.
- ಆದರೆ **20** ವರ್ಷಗಳು ಕಳೆದರೂ ಈ ಸ್ಥಳೀಯ ಸಂಸ್ಥೆಗಳ ಅಧಿಕಾರ ವಿಕೇಂದ್ರೀಕರಣವಿಲ್ಲದೆ ಮತ್ತು ಆರ್ಥಿಕ ಸದೃಢತೆ ಇಲ್ಲದೆ ಸೊರಗಿ ಹೋಗುತ್ತಿವೆ. ಈ ಹಿನ್ನೆಲೆಯಲ್ಲಿ ಸ್ಥಳೀಯ ಸಂಸ್ಥೆಗಳ ಬಲವರ್ಧನೆಗೆ ನಾವು ಕಟಿಬದ್ಧವಾಗಿದ್ದೇವೆ.

## ಪಂಚಾಯತ್ ರಾಜ್ ಸಂಸ್ಥೆಗಳು

- ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗಳ ಕಾಲಾವಧಿ ಮುಗಿದು, ಈ ಸಂಸ್ಥೆಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಿ **2** ವರ್ಷ ಕಳೆದಿದ್ದರೂ ರಾಜ್ಯ ಸರ್ಕಾರ ಚುನಾವಣೆ ನಡೆಸಲು ಕ್ರಮ ಕೈಗೊಂಡಿಲ್ಲ.
- ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕ್ಷೇತ್ರ ವಿಂಗಡಣೆ ಕ್ರಮ ಇನ್ನೂ ಮುಗಿದಿಲ್ಲ.
- ಹಿಂದುಳಿದ ವರ್ಗಗಳಿಗೆ ಕ್ಷೇತ್ರವಾರು ಮೀಸಲಾತಿಗೆ ಸಂಬಂಧಿಸಿದ ಕ್ರಮ ನೆನಗುದಿಗೆ ಬಿದ್ದಿದೆ.
- ರಾಜ್ಯ ಸರ್ಕಾರ ಹಿಂದುಳಿದ ವರ್ಗಗಳ ಮೀಸಲಾತಿ ಅಧಿಸೂಚನೆ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನಲ್ಲಿ ವ್ಯಾಜ್ಯಗಳ ದಾವೆ ಮುಖೇನ ನ್ಯೂನ್ಯತೆ ಸರಿಪಡಿಸಿ ನಾಗರೀಕರಿಗೆ ಉತ್ತಮ ಸೇವೆ ಒದಗಿಸಲು ಅನುವು ಮಾಡಿಕೊಡಲಾಗುವುದು.
- ಈ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟಿನ ನಿರ್ದೇಶನದಂತೆ ನಿಯತಕಾಲಿಕೆಯಲ್ಲಿ ಕ್ಷೇತ್ರ ವಿಂಗಡಣೆ ಮತ್ತು ಕ್ಷೇತ್ರವಾರು ಹಿಂದುಳಿದ ವರ್ಗಗಳಿಗೆ ಮೀಸಲಾತಿಯನ್ನು ಕಾನೂನಿನಂತೆ ಅನುಸರಿಸಿ ಚುನಾವಣೆಯನ್ನು ತುರ್ತಾಗಿ ನಡೆಸಲಾಗುವುದು.

## ಗ್ರಾಮ ಪಂಚಾಯಿತಿಗಳಿಗೆ ಅಭಿವೃದ್ಧಿ ನಿಧಿ

- ಸ್ಥಳೀಯ ಸರಕಾರಗಳು ಗ್ರಾಮ ಪಂಚಾಯಿತಿಗಳಿಗೆ ಕುಡಿಯುವ ನೀರಿನ ಪೂರೈಕೆ, ರಸ್ತೆಗಳ ನಿರ್ಮಾಣ- ಚರಂಡಿಗಳ ಸ್ವಚ್ಛತೆ, ಸಮುದಾಯ ಭವನ, ಶಾಲಾ ಕಾಲೇಜುಗಳ ಶೌಚಾಲಯಗಳ ನಿರ್ವಹಣೆ, ಬೀದಿ ದೀಪ, ಗ್ರಂಥಾಲಯಗಳ ನಿರ್ವಹಣೆ ಹಾಗೂ ಸಿಬ್ಬಂದಿ ನಿರ್ವಹಣೆಗಳನ್ನು ನಿಭಾಯಿಸುತ್ತಿವೆ. ಆದರೆ ಈ ವ್ಯವಸ್ಥೆಯಿಂದ ಆರ್ಥಿಕ ಸ್ಥಿತಿ ಕುಸಿದು ಹೋಗಿದೆ.
- ಆದ್ದರಿಂದ ಗ್ರಾಮ ಪಂಚಾಯಿತಿಗಳ ಆಯವ್ಯಯವನ್ನು ಕನಿಷ್ಠ **50-60** ಲಕ್ಷದಿಂದ **1** ಕೋಟಿ ವರೆಗೆ ಸರಿದೂಗಿಸಲು ಆರ್ಥಿಕ ಬೆಂಬಲ ನೀಡಲಾಗುವುದು.
- ಗ್ರಾಮ ಪಂಚಾಯಿತಿಗಳು ನಿರ್ವಹಿಸುವ ಇ-ಸ್ವತ್ತು ಮತ್ತು ಪಂಚತಂತ್ರ-**2** ತಂತ್ರಾಂಶಗಳ ಅನುಷ್ಠಾನದಲ್ಲೂ ಸಾಕಷ್ಟು ನಾಗರಿಕರಿಗೆ ತೊಂದರೆ ಉಂಟಾಗುತ್ತಿದ್ದು, ಈ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು.
- ಕಂದಾಯ ಇಲಾಖೆ ಕಾವೇರಿ-**2** ತಂತ್ರಾಂಶ ಮತ್ತು ಇ-ಮೋಜಣಿ ತಂತ್ರಾಂಶದೊಂದಿಗೆ ಇ-ಸ್ವತ್ತು ತಂತ್ರಾಂಶಗಳು ಒಂದಕ್ಕೊಂದು ಸ್ಪರ್ಧಾತ್ಮಕವಾಗಿ ಇಲ್ಲದೆ ಹಲವಾರು ನ್ಯೂನ್ಯತೆಗಳಿಗೆ ಮತ್ತು ಸಮಸ್ಯೆಗಳಿಗೆ ಎಡೆಮಾಡಿ ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಈ ತಂತ್ರಾಂಶಗಳಲ್ಲಿನ ನ್ಯೂನ್ಯತೆಗಳನ್ನು ಸರಿಪಡಿಸಿ, ನಾಗರೀಕರಿಗೆ ಉತ್ತಮ ಸೇವೆ ಒದಗಿಸಲು ಅನುವು ಮಾಡಿಕೊಡಲಾಗುವುದು.
- ಮುಖ್ಯಮಂತ್ರಿ ಗ್ರಾಮವಿಕಾಸ ಯೋಜನೆಯನ್ನು ಪುನರ್ ಪ್ರಾರಂಭಿಸಿ ಪ್ರತಿ ಗ್ರಾಮಕ್ಕೆ **1** ಕೋಟಿ ರೂ. ಅನುದಾನದಂತೆ **1** ಸಾವಿರ ಗ್ರಾಮಗಳನ್ನು ಒಂದು ಸಾವಿರ ಕೋಟಿ ರೂ. ಅಂದಾಜು ಮೊತ್ತದಲ್ಲಿ ಮುಂದಿನ **3** ವರ್ಷಗಳಲ್ಲಿ ಕೈಗೊಳ್ಳಲಾಗುವುದು.



## ನಗರ ಪ್ರದೇಶಗಳ ಕಾರ್ಮಿಕರಿಗೆ ಉದ್ಯೋಗಾವಕಾಶ

- ನಗರ ವ್ಯಾಪ್ತಿಯ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ್ ಉದ್ಯೋಗ ಖಾತ್ರಿ ಯೋಜನೆ. **(URBAN MNREG)**
- ನಗರ ಪ್ರದೇಶಗಳಿಗೆ ಗ್ರಾಮಾಂತರ ಪ್ರದೇಶಗಳಿಂದ ಲಕ್ಷಾಂತರ ಕಾರ್ಮಿಕರು ಉದ್ಯೋಗ ಅರಸಿ ವಲಸೆ ಬರುತ್ತಾರೆ. ಆದರೆ, ಅವರುಗಳಿಗೆ ಖಾಯಂ ಉದ್ಯೋಗ ಗ್ಯಾರಂಟಿ ಇರುವುದಿಲ್ಲ ಮತ್ತು ಪ್ರತಿವಾರ ಅಥವಾ ತಿಂಗಳು ಸಂದಾಯವಾಗುವ ಸಂಬಳ ಜೀವನಕ್ಕೆ ಸಾಕಾಗುವುದಿಲ್ಲ.
- ಈ ಹಿನ್ನೆಲೆಯಲ್ಲಿ ರಾಜ್ಯದ ಪಟ್ಟಣ & ನಗರ ಪ್ರದೇಶ ವ್ಯಾಪ್ತಿಗಳಲ್ಲಿ ವರ್ಷಕ್ಕೆ **100** ದಿನಗಳ ಉದ್ಯೋಗ ಖಾತ್ರಿಯ ಹೊಸ ಯೋಜನೆಯನ್ನು **18-60** ವರ್ಷ ವಯೋಮಿತಿಯೊಳಗಿನವರಿಗೆ ಅನ್ವಯವಾಗುವಂತೆ **2023-24**ನೇ ಸಾಲಿನಿಂದ ಜಾರಿಗೊಳಿಸಲಾಗುವುದು.
- ಈ ಯೋಜನೆ ಅನುಷ್ಠಾನಕ್ಕೆ **2023-24**ನೇ ಸಾಲಿನಲ್ಲಿ **1000** ಕೋಟಿ ರೂ.ಗಳನ್ನು ಒದಗಿಸಲಾಗುವುದು.

# ಕೃಷಿ ಮತ್ತು ಹೈನುಗಾರಿಕೆ

## ಕನ್ನಡಿಗರ ಅಸ್ಮಿತೆ ಮತ್ತು ನಂದಿನಿ ಬ್ರಾಂಡ್‌ಗೆ ಅಮುಲ್ ಸಂಸ್ಥೆಯಿಂದ ಧಕ್ಕೆ

**ರಾಜ್ಯದ ಹಾಲು ಉತ್ಪಾದಕರ ಜೀವನಾಡಿಯಾಗಿರುವ, ದೇಶದಲ್ಲಿ 2ನೇ ಅತಿ ದೊಡ್ಡ ಹಾಲು ಮಹಾ ಮಂಡಳಿ ಸಂಸ್ಥೆಯಾಗಿರುವ ಮತ್ತು 160ಕ್ಕೂ ಹೆಚ್ಚು ನಂದಿನಿ ಹಾಲು ಮತ್ತು ನಾನಾ ಹಾಲಿನ ಉತ್ಪನ್ನಗಳ ನಂದಿನಿ ಬ್ರಾಂಡ್ ಹೊಂದಿರುವ ಕೆ.ಎಂ.ಎಫ್.**

- ಕಿತ್ತೊಗೆಯಿರಿ ಅಮುಲ್ - ಉಳಿಸಿ ನಂದಿನಿ
- ಸಂಸ್ಥೆಯನ್ನು ಗುಜರಾತ್‌ನ ಅಮುಲ್ ಸಂಸ್ಥೆಯೊಂದಿಗೆ ವಿಲೀನ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕಣ್ಣುಮುಚ್ಚಾಲೆ ಆಟದೊಂದಿಗೆ ಹುನ್ನಾರ ನಡೆಸಿದೆ.
- ಅಮುಲ್ ಐಸ್ ಕ್ರೀಂ ಉತ್ಪನ್ನಗಳನ್ನು ಬೆಂಗಳೂರಿನಲ್ಲಿ ಮಾರಾಟ ಮಾಡುತ್ತಿದ್ದು ಅಮುಲ್ ಸಂಸ್ಥೆ ರಾಜ್ಯದಲ್ಲಿ ಇದ್ದಕ್ಕಿದ್ದಂತೆ ಹಾಲು ಮತ್ತು ಮೊಸರನ್ನು ಮಾರುಕಟ್ಟೆಗೆ ಇಳಿಸಿ ಷಡ್ಯಂತ್ರದಿಂದ ಮಾರುಕಟ್ಟೆ ಪ್ರವೇಶಿಸಿದೆ. ಸಹಕಾರಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುವ ಸಂಸ್ಥೆಗಳ ಮಧ್ಯೆ ಅನಾರೋಗ್ಯಕರ ಸ್ಪರ್ಧೆಯಾಗುವುದು ಸಹಕಾರಿ ಸಂಘಗಳ ಸದಸ್ಯರ ಹಿತಕ್ಕೆ ಧಕ್ಕೆಯಾಗುತ್ತದೆ. ಆದ್ದರಿಂದ, ಇಂತಹ ಕುತಂತ್ರಕ್ಕೆ ಮಣಿಯದೆ ಕಿತ್ತೊಗೆಯಿರಿ ಅಮುಲ್ -ಉಳಿಸಿ ನಂದಿನಿ ಅಭಿಯಾನ ಪ್ರತಿಯೊಬ್ಬ ಕನ್ನಡಿಗನು ವಿವಿಧ ರೀತಿಯ ರಂಗಗಳಲ್ಲಿ ಪ್ರಾರಂಭಿಸಬೇಕು.
- ಕನ್ನಡಿಗರ ಅಸ್ಮಿತೆ ಮತ್ತು ನಂದಿನಿ ಬ್ರಾಂಡ್ ಉಳಿಸಲು ಜಾತ್ಯತೀತ ಜನತಾದಳ ಕಟಿಬದ್ಧವಾಗಿದೆ.




## ಕೋವಿಡ್ ನಂತರ ಮತ್ತು ಅತಿವೃಷ್ಟಿಯಿಂದ ಸೊರಗಿ ಹೋಗಿರುವ ಹೈನುಗಾರಿಕೆಗೆ ಕಾಯಕಲ್ಪ

- ಕೋವಿಡ್ ನಂತರ ಮತ್ತು ಅತಿ ಮಳೆಯಿಂದ ಕಳೆದ ಮೂರು ವರ್ಷಗಳಿಂದ ರಾಜ್ಯದಲ್ಲಿ ಕರ್ನಾಟಕ ಮಹಾ ಮಂಡಳಿಯ (ಕೆ.ಎಂ.ಎಫ್) ವ್ಯಾಪ್ತಿಯ **15** ಜಿಲ್ಲಾ ಹಾಲು ಒಕ್ಕೂಟಗಳಿಂದ ಸಂಗ್ರಹಣವಾಗುತ್ತಿದ್ದ **95** ಲಕ್ಷ ಲೀಟರ್ ಹಾಲು **82** ಲಕ್ಷ ಲೀಟರ್‌ಗೆ ಇಳಿದಿದೆ.
- ಸತತ ಮಳೆಯಿಂದ ಹಾಲಿನ ಇಳುವರಿ ಕುಂಠಿತವಾದರೆ, ಹಾಲಿನ ಗುಣಮಟ್ಟ ಇಳಿದಿದೆ. ಪಶು ಆಹಾರ ತಯಾರಿಕೆಗೆ ಉಪಯೋಗಿಸುವ ಭತ್ತದ ತೌಡು, ಸೊಯಾಬೀನ್, ಮೆಕ್ಕೆ ಜೋಳ, ಹತ್ತಿ ಬೀಜಗಳು, ಅಕ್ಕಿನುಚ್ಚು, ಶೇಂಗಾ ಸಿಪ್ಪೆ, ಹುರುಳಿ ದ್ವಿದಳ ಧಾನ್ಯಗಳ ಬೆಲೆ ಗಗನಕ್ಕೆ ಏರಿವೆ.
- ಇನ್ನೊಂದಡೆ ರಾಸುಗಳಿಗೆ ತಗಲಿರುವ ಬಾಯಿ ಮತ್ತು ಕಾಲು ಹಾಗೂ ಗಂಟು ರೋಗಗಳಿಂದ ರೈತರು ಹೈರಾಣಾಗಿದ್ದಾರೆ. ಇದರೊಂದಿಗೆ ಪಶುವಿನ ಹಾರೈಕೆಗೆ ಕಾರ್ಮಿಕರು ದೊರೆಯುತ್ತಿಲ್ಲ, ದೊರೆತರೂ ಅವಿರಗೆ ಪಾವತಿಸಬೇಕಾದ ಕೂಲಿ ಅತಿ ಹೆಚ್ಚು, ಯುವಕುಲ ಡೈರಿ ಉದ್ಯಮದಲ್ಲಿ ಆಸಕ್ತಿ ಹೊಂದಿಲ್ಲ.

## ಹೈನೋದ್ಯಮಕ್ಕೆ ಪ್ರೋತ್ಸಾಹ

- ಜಿಲ್ಲಾ ಹಾಲು ಒಕ್ಕೂಟಗಳ ಹಾಲು ಉತ್ಪಾದಕರಿಗೆ ಸರ್ಕಾರ ನೀಡುವ ಪ್ರೋತ್ಸಾಹ ಧನ **5** ರೂ. ಸೇರಿ ಪ್ರತಿ ಲೀಟರ್‌ಗೆ ರೂ. **34** ನೀಡುತ್ತಿದ್ದೇವೆ.
- ಈ ಪ್ರೋತ್ಸಾಹ ಧನ **10** ಲಕ್ಷ ಹಾಲು ಉತ್ಪಾದಕರಿಗೆ ಮತ್ತು **40** ಲಕ್ಷ ಗ್ರಾಹಕರಿಗೆ ಅನುಕೂಲವಾಗುತ್ತದೆ.
- ಈ ಹಿನ್ನೆಲೆಯಲ್ಲಿ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ **2** ರೂ. ಹೆಚ್ಚುವರಿ ಸಹಾಯಧನ ಹಾಗೂ ಜಿಲ್ಲಾ ಹಾಲು ಒಕ್ಕೂಟಗಳು ಪ್ರತಿ ಲೀಟರ್ ಹಾಲಿಗೆ **2** ರೂ. ಹೆಚ್ಚುವರಿ ದರ ನೀಡಿ ನಿಗದಿಪಡಿಸಲು ಅನುವು ಮಾಡಿಕೊಡಲಾಗುವುದು.
- ಕೆ.ಎಂ.ಎಫ್. ಮತ್ತು ಜಿಲ್ಲಾ ಹಾಲು ಒಕ್ಕೂಟಗಳು ಪಶು ಆಹಾರ ಘಟಕಗಳನ್ನು ಸ್ಥಾಪಿಸಲು ಎಲ್ಲಾ ರೀತಿಯ ಆರ್ಥಿಕ ನೆರವು ನೀಡಲಾಗುವುದು ಮತ್ತು ಪಶು ಆಹಾರ ತಯಾರಿಕೆಗೆ ಅಗತ್ಯವಿರುವ ದವಸ-ಧಾನ್ಯಗಳ ವ್ಯವಸ್ಥಿತ ಸಂಗ್ರಹಣೆಗೆ ಬೆಂಬಲ ನೀಡಲಾಗುವುದು.

## ಪಶುಸಂಗೋಪನೆ- ಜಾನುವಾರುಗಳ ಹಾರೈಕೆ

- ರಾಜ್ಯದಲ್ಲಿ **4234** ಪಶು ಚಿಕಿತ್ಸಾಲಯಗಳು ಇವೆ. ಈ ಪೈಕಿ **1000** ಪಶು ಚಿಕಿತ್ಸಾಲಯಗಳಲ್ಲಿ ಮೂಲಭೂತ ಸೌಕರ್ಯಗಳು ಇರುವುದಿಲ್ಲ.
- ಇದರೊಂದಿಗೆ ಪಶು ವೈದ್ಯಾಧಿಕಾರಿಗಳು, ಪಶು ವೈದ್ಯಕೀಯ ಪರೀಕ್ಷಕರು ಮತ್ತು ಡಿ-ದರ್ಜೆ ನೌಕರರು ಸೇರಿದಂತೆ **8** ಸಾವಿರ ಹುದ್ದೆಗಳ ಖಾಲಿ ಇರುತ್ತವೆ.
- ಪಶು ಸಂಜೀವಿನಿ ಯೋಜನೆ ಅಡಿ **791** ಆಂಬುಲೆನ್ಸ್ ಗಳನ್ನು ಒದಗಿಸಿದ್ದು, ಈ ವಾಹನಗಳ ಉಪಯೋಗಕ್ಕೆ ಅಗತ್ಯವಿರುವ ಚಾಲಕ ಮತ್ತು ಸಿಬ್ಬಂದಿಯನ್ನು ನೇಮಿಸಿರುವುದಿಲ್ಲ.
- ಪ್ರಕೃತಿ ವಿಕೋಪಗಳಾದ ಪ್ರವಾಹ, ಸಿಡಿಲಾಘಾತ, ಬೆಂಕಿ ಅನಾಹುತ, ಭೂಕಂಪ ಇತರೆ ನೈಸರ್ಗಿಕ ಕಾರಣಗಳಿಂದ ಮೃತಪಟ್ಟ ಜಾನುವಾರುಗಳಿಗೆ ಮತ್ತು ರೋಗ ರುಜಿನಿಗಳಿಂದ ಮರಣಿಸಿದ ಕುರಿ/ಮೇಕೆಗಳಿಗೆ ನೀಡುವ ಪರಿಹಾರ ವ್ಯವಸ್ಥಿತ ರೀತಿಯಲ್ಲಿ ಹಂಚಿಕೆ ಆಗುತ್ತಿಲ್ಲ.
- ಈ ಹಿನ್ನೆಲೆಯಲ್ಲಿ ಜಾನುವಾರುಗಳ ಆರೈಕೆ, ಅವುಗಳ ಪೋಷಣೆಗಾರನ ಹಿತದೃಷ್ಟಿ ಒಳಗೊಂಡಂತೆ ವೈದ್ಯರ ಮತ್ತು ಸಿಬ್ಬಂದಿ ನೇಮಕಕ್ಕೆ ಕ್ರಮ ಕೈಗೊಂಡಿರುವುದಿಲ್ಲ.

## ರೈತರ ಬೆಳೆಗಳಿಗೆ ಖಾತರಿ ಬೆಂಬಲ ಬೆಲೆ



- ಕೃಷಿ ಪ್ರಧಾನ ದೇಶದಲ್ಲಿ ಪ್ರಕೃತಿ ವಿಕೋಪಕ್ಕೆ ತುತ್ತಾಗುವ ಸಂದರ್ಭದಲ್ಲಿ ರೈತನ ಬೆಳೆಗೆ ಸರ್ಕಾರ ಬೆಂಬಲ ಬೆಲೆ ಯೋಜನೆ ಅಡಿ ಕೃಷಿ ಉತ್ಪನ್ನಗಳನ್ನು ಉತ್ಪಾದಿಸುತ್ತಾರೆ. ಆದರೆ, ಯೋಜನೆ ಅಡಿ ರೂಪಿಸಿರುವ ವ್ಯವಸ್ಥೆ ಕ್ರಮಬದ್ಧವಾಗಿಲ್ಲ.
- ತಾಲ್ಲೂಕಿನಲ್ಲಿ ಅವಶ್ಯವಿರುವಷ್ಟು ಖರೀದಿ ಕೇಂದ್ರಗಳನ್ನು ಸಮಯಕ್ಕೆ ಸರಿಯಾಗಿ ತೆರೆಯದೆ ಇರುವುದು, ಮಧ್ಯವರ್ತಿಗಳ ಹಾವಳಿ, ಸರದಿಯಲ್ಲಿ ದಿನಗಟ್ಟಲೆ ಟ್ರ್ಯಾಕ್ಟರ್‌ಗಳೊಂದಿಗೆ ನಿಂತು ಕಾಯುವ ಸ್ಥಿತಿ, ಆಗಿಂದಾಗ್ಗೆ ಕೈಕೊಡುವ ಸರ್ವರ್ ಸಮಸ್ಯೆ ಮತ್ತು ತೇವಾಂಶ ಆಧಾರದ ಮೇಲೆ ಗ್ರೇಡಿಂಗ್ ಹೆಸರಿನಲ್ಲಿ ರೈತರ ಶೋಷಣೆ ಮುಂತಾದ ಸಮಸ್ಯೆಗಳು ತಲೆದೋರಿವೆ. ಇದಲ್ಲದೆ ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ರೈತರು ಬೆಳೆಯುವ ಹಲವಾರು ಬೆಳೆಗಳಿಗೆ ಸಮಯೋಚಿತವಾಗಿ ಮತ್ತು ನ್ಯಾಯವಾದ ಬೆಂಬಲ ಬೆಲೆಯನ್ನು ನೀಡಿ ರೈತರ ಬೆಳೆಗಳನ್ನು ಖರೀದಿಸಲು ಕಟಿಬದ್ಧವಾಗಿದ್ದೇವೆ.
- ಇತರೆ ಧಾನ್ಯಗಳ ಸಂಗ್ರಹಣೆ ವ್ಯವಸ್ಥೆ ಮಾಡಲಾಗುವುದು.